ಎಕ್ಸೆಲ್ ಪಬ್ಲಿಕ್ ಸ್ಕೂಲ್

# ನುಡಿಸಂಭ್ರಮ

ಮೈಸೂರು, ನವೆಂಬರ್ 16: ಶತಶತಮಾನಗಳ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ನಮ್ಮ ಕನ್ನಡ ನಾಡು – ನುಡಿಯು ಏಕೀಕರಣವಾದ ದಿನದ ಅಂಗವಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ಪ್ರತಿಬಾರಿಯಂತೆ ವಿಶೇಷವಾಗಿ 'ನುಡಿ ಸಂಭ್ರಮ' ಎಂಬ ಶೀರ್ಷಿಕೆಯಡಿ ವೈವಿಧ್ಯಮಯವಾಗಿ, ವರ್ಣಮಯವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ದಿನಾಂಕ 16.11.2024ನೆ ಶನಿವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ ಡಿ ಸುದರ್ಶನ್ ಅವರು ಆಗಮಿಸಿದ್ದರು. ನಮ್ಮ ಶಾಲೆಯ ಸಂಯೋಜನಾಧಿಕಾರಿಗಳಾದ ಶ್ರೀಯುತ ಪ್ರಶಾಂತ್ ಎಚ್ ಎಮ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಆಡಳಿತಾಧಿಕಾರಿಗಳಾದ ಕರ್ನಲ್ ಚೇತನ್ ಅವರು, ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯೂ ಕೆ ಜಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಭವ್ಯಾ ಅವರು ನಡೆಸಿಕೊಟ್ಟರು. ಶ್ರೀಯುತ ಗಣೇಶ್ ಭಟ್ ಅವರು ನೆರೆದ ಜನಸ್ತೋಮವನ್ನು ಸ್ವಾಗತಿಸಿದರು. 4ನೆಯ ತರಗತಿಯ ಆದಿತ್ ಎ ವಾಸನ್ ಎಂಬ ವಿದ್ಯಾರ್ಥಿ ಕನ್ನಡ ನಾಡು–ನುಡಿ, ಸಂಸ್ಕೃತಿಯ ಮಹತ್ವವನ್ನು ಕುರಿತು ಮಾತನಾಡಿದರು. ಶ್ರೀಮತಿ ಇಂದುಶ್ರೀ ಅವರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಮುಖ್ಯ ಅತಿಥಿಗಳಾದ ಶ್ರೀಯುತ ಡಾ. ಎಂ ಡಿ ಸುದರ್ಶನ್ ಅವರು "ಕನ್ನಡ ನುಡಿಯು ಮನೆ ಮನೆ ಮಾತಾಗಬೇಕು, ಎಲ್ಲರ ಬಾಯಿಯಲ್ಲಿಯೂ ನೆಲೆಗೊಂಡಿರಬೇಕು" ಎಂದು ಹೇಳಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭಾಕಾರ್ಯಕ್ರಮದ ಕೊನೆಯಲ್ಲಿ ಶ್ರೀಯುತ ಗಣೇಶ್‌ಭಟ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

ಸಭಾ ಕಾರ್ಯಕ್ರಮದ ತರುವಾಯ, ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು 1 ಗಂಟೆ 30 ನಿಮಿಷಗಳ ಕಾಲ ಪ್ರಸ್ತುತಪಡಿಸಲ್ಪಟ್ಟವು. ನುಡಿ ಸಂಭ್ರಮ ಎಂಬುದನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡು ಭರತನಾಟ್ಯ, ನೃತ್ಯ, ಸಮೂಹ ಗಾಯನ ಮತ್ತು ನಾಟಕ ರೂಪಗಳಲ್ಲಿ ವಿದ್ಯಾರ್ಥಿಗಳು ಪೂರ್ವಭಾವಿ ತಯಾರಿಯಂತೆ, ಶಿಕ್ಷಕರ ಮಾರ್ಗದರ್ಶನವನ್ನು ಅನುಸರಿಸಿ, ಕಾರ್ಯಕ್ರಮವನ್ನು ಸೊಗಸಾಗಿ ನಡೆಸಿಕೊಟ್ಟರು. ಕರ್ನಾಟಕದ ವೈಭವವು ಕವಿಗಳು, ದೇವೇಂದ್ರ, ಯಮಧರ್ಮ ಮತ್ತು ಚಿತ್ರಗುಪ್ತರ ನಾಟಕದ ನಿರೂಪಣೆಯ ಮೂಲಕ ಅನಾವರಣಗೊಂಡು ಎಲ್ಲರ ಮನವನ್ನು ಮುದಗೊಳಿಸಿತು.




EXCELSIOR Ever upward



## ಮುಖ್ಯ ಅತಿಥಿಗಳು

# ಡಾ. ಎಂ ಡಿ ಸುದರ್ಶನ್

(ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ)



ಇಂದಿನ ಕನ್ನಡ ರಾಜ್ಯೋತ್ಸವದ ಸುಸಂದರ್ಭದಲ್ಲಿ ಕನ್ನಡ ಭಾಷೆಗೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ಹಂಚಿಕೊಳ್ಳುತ್ತೇನೆ. ಜಾಗತಿಕವಾಗಿ ನಾವು ವಿಶ್ವವನ್ನು ಭಾವಿಸಿದ ಹಾಗೆ ನಾವೂ ವಿಶ್ವಮಾನವರಾಗಿ ಯೋಚಿಸಬೇಕು. ಆಗ ಯಾವುದೇ ಭಾಷೆಗೂ ಅಡೆತಡೆಗಳು ಇರುವುದಿಲ್ಲ. ಆದರೆ ಈ ಸಾಧನೆಗೆ ನಮ್ಮ ಮುಂದಿರುವ ಸವಾಲುಗಳನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದು ಮುಖ್ಯವಾದದ್ದು. ನಾವು ತಿಳಿದಿರುವ ಹಾಗೆ ಮನೆಯೇ ಮೊದಲ ಪಾಠಶಾಲೆ. ನಮ್ಮ ಮಾತೃ ಭಾಷೆ ಬಳಕೆ ಪ್ರಾರಂಭವಾಗುವುದೇ ನಮ್ಮ ಮನೆಯಲ್ಲಿ. ಅನಂತರ ಅದು ಎಲ್ಲೆಡೆ ವ್ಯಾಪಿಸುತ್ತದೆ. ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಬಹುಶಃ ನವೆಂಬರ್‌ನಲ್ಲಿ ಕನ್ನಡ ಪ್ರೀತಿಯ ಜ್ವರ ಜೋರಾಗಿ ನವೆಂಬರ್ ೩೦ ರಂದು ಇಳಿದು ಹೋಗುತ್ತದೆ. ಮತ್ತೆ ಆ ಜ್ವರ ನಮ್ಮಲ್ಲಿ ಏರಬೇಕಾದರೆ ಮುಂದಿನ ನವೆಂಬರ್‌ವರೆಗೆ ಕಾಯಬೇಕಾಗುತ್ತದೆ. ಈ ಒಂದು ಚೌಕಟ್ಟಿನಲ್ಲಿ ಯೋಚಿಸಿದರೆ ಮಗುವಿನ ವ್ಯಕ್ತಿತ್ವ ರೂಪುಗೊಳ್ಳಬೇಕಾದರೆ ಮಗು ಪ್ರತಿದಿನ ತನ್ನ ಮಾತೃಭಾಷೆಯಲ್ಲಿ ವ್ಯವಹರಿಸಬೇಕು. ಮಾತೃಭಾಷೆಯ ಬಳಕೆಯಿಂದ ಪರಿಣಾಮಕಾರಿಯಾದ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬುದು ಮನೋವೈಜ್ಞಾನಿಕವಾಗಿಯೂ ಸಾಬೀತಾಗಿರುವುದನ್ನು ಕಾಣಬಹುದು. ಈ ವಿಚಾರವಾಗಿ ಸಂಘಜೀವಿಯಾಗಿ ಮತ್ತು ಸಮಾಜಜೀವಿಯಾಗಿ ಬದುಕುವ ಸಂದರ್ಭದಲ್ಲಿ ನಾವು ನಮ್ಮ ಅಕ್ಕಪಕ್ಕದವರು, ಸಂಬಂಧಿಕರು, ನಮ್ಮ ಮನೆಗೆ ಬರುವ ಹಾಲಿನವರು, ದಿನಪತ್ರಿಕೆಯವರು, ತರಕಾರಿಯವರ ಜೊತೆ ವ್ಯವಹರಿಸುವಾಗ, ನಮ್ಮ ನಾಡಿನ ಅಧಿಕೃತ ಭಾಷೆಯಾದ ಕನ್ನಡದ ಮೇಲಿನ ಹಿಡಿತ ಅತ್ಯಂತ ಮುಖ್ಯವಾದದ್ದು. ಮಗು ತಾನು ಬದುಕುವ ನಾಡಿನ ಭಾಷೆಯನ್ನು ಸರಿಯಾಗಿ ಕಲಿಯದಿದ್ದರೆ, ಸಹಜವಾಗಿ ಅಕ್ಕಪಕ್ಕದವರ ಜೊತೆಯೂ ಸರಿಯಾಗಿ ವ್ಯವಹರಿಸಲಾಗದೆ ಅನಾಥಜೀವನವನ್ನು ನಡೆಸಬೇಕಾದಂತಹ ಪರಿಸ್ಥಿತಿ ಎದುರಾಗುತ್ತದೆ. ನಾವು ನಮಗೆ ತಿಳಿಯದ ಭಾಷೆಯನ್ನಾಡುವ ನಾಡಿಗೆ ಅಥವಾ ದೇಶಕ್ಕೆ ಹೋದಾಗ ಮಾತನಾಡಲಾಗದೆ ಅನಾಥ ಭಾವನೆಯ ಪರಿಸ್ಥಿತಿಯನ್ನು ಎದುರಿಸಿರುವುದನ್ನು ಕಾಣಬಹುದು. ಹೀಗಾಗಿ ನಮ್ಮ ಮಕ್ಕಳು ಅಕ್ಕ ಪಕ್ಕದವರ ಜೊತೆಗೆ ವ್ಯವಹರಿಸಲು ಕನ್ನಡವನ್ನು ತಿಳಿಯದಿದ್ದಾಗ, ಮೊಬೈಲ್‌ನಲ್ಲಿರುವ ಯಾವುದೋ ತಿಳಿಯದ ಸಂಗತಿಗಳಿಗೆ ಆಕರ್ಷಿತರಾಗಿ ಅದರ ಸುಳಿಯಲ್ಲಿ ಸಿಕ್ಕಿ ಬೀಳುವರು. ಇದು ತುಂಬಾ ಅಪಾಯಕಾರಿಯಾದದ್ದು ಎಂದು ತಿಳಿಸುತ್ತೇನೆ. ಈ ಸಂದರ್ಭದಲ್ಲಿ ಭಾಷೆ ಮತ್ತು ಬದುಕು ಎರಡೂ ಕೂಡ ಒಂದೇ ನಾಣ್ಯದ ಎರಡು ಮುಖಗಳು ಎಂದು ಹೇಳಲು ಇಚ್ಛಿಸುತ್ತೇನೆ. ಪರಿಪೂರ್ಣವಾದ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಭಾಷೆ ಮತ್ತು ಬದುಕು ತುಂಬಾ ಮುಖ್ಯವಾದದ್ದು. ನಾವೆಲ್ಲ ಶಿಕ್ಷಣ ಎಂದರೆ ಶಾಲೆಯಲ್ಲಿ ನಾಲ್ಕು ಗೋಡೆಗಳ ಮಧ್ಯದಲ್ಲಿ ಮಾತ್ರ ಸಿಗುವಂತದ್ದು ಎಂದು ತಿಳಿದಿದ್ದೇವೆ. ಆದರೆ ಇದು ನಮ್ಮ ತಪ್ಪು ಕಲ್ಪನೆ ಎನಿಸುತ್ತದೆ. ಏಕೆಂದರೆ ಶಾಲೆಗೆ ಹೋಗುವ ಮಗುವನ್ನು ನಾವು ನಮ್ಮ ಅಕ್ಕ ಪಕ್ಕದವರ ಮನೆಯಲ್ಲಿ, ಬಂಧುಗಳ ಮನೆಯಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುವುದಿಲ್ಲ. ಹಬ್ಬ-ಹರಿದಿನ, ಜಾತ್ರೆ, ಉತ್ಸವ ಮದುವೆ-ಮುಂಜಿ, ಸಾವು-ನೋವು ಇಲ್ಲಿಗೆಲ್ಲ ನಾವು ನಮ್ಮ ಮಕ್ಕಳನ್ನು ಕರೆದುಕೊಂಡು ಹೋದರೆ ಅವುಗಳನ್ನು ಹೇಗೆ ಆಚರಿಸುತ್ತಾರೆ? ಅಲ್ಲಿಗೆ ಬರುವ ಸಂಬಂಧಿಕರ ಜೊತೆ ಹೇಗೆ ಮಾತನಾಡಬೇಕು? ಸಾವಿನ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕು? ಎಂಬೆಲ್ಲ ಶಿಕ್ಷಣವನ್ನು ಮಕ್ಕಳು ಕಲಿಯುತ್ತಾ ಹೋಗುತ್ತಾರೆ. ಇದು ಮಕ್ಕಳಲ್ಲಿ ಸಾಂಸ್ಕೃತಿಕವಾಗಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕಾರಿಯಾಗುತ್ತದೆ. ನಮ್ಮ ಮಕ್ಕಳನ್ನು ನರ್ಸರಿಯಿಂದ ತಂದ ಗಿಡದ ರೀತಿ ನಮ್ಮ ಇಚ್ಛೆಗೆ ಅನುಗುಣವಾಗಿ ಬೆಳೆಸುತ್ತಾ ಹೋಗುತ್ತಿದ್ದೇವೆ. ಆದರೆ ಕುಂಡದಲ್ಲಿರುವ ಗಿಡಕ್ಕಿಂತ ಈ ಭೂಮಿಯಲ್ಲಿ ಆಳವಾಗಿ ಬೇರು ಬಿಟ್ಟು ಸ್ವ-ಇಚ್ಛೆಯಿಂದ ಬೆಳೆಯುವ ಗಿಡ ಮರಗಳ ರೀತಿ ಬೆಳೆಸಬೇಕು. ಅಂತಹ ಗಿಡಮರಗಳು ತಮ್ಮ ಬದುಕಿನಲ್ಲಿ ಎದುರಾಗುವ ಎಂತಹ ಆಘಾತಗಳನ್ನಾದರೂ ಎದುರಿಸುವ ಶಕ್ತಿಯನ್ನು ಹೊಂದಿರುತ್ತವೆ. ಆದ್ದರಿಂದ ನಮ್ಮ ಮಕ್ಕಳನ್ನು ಕುಂಡದಲ್ಲಿರುವ ಗಿಡಗಳ ರೀತಿ ಬೆಳೆಸುವ ಬದಲು, ನಮ್ಮ ಭಾಷೆಯೊಂದಿಗೆ ಸ್ವಚ್ಛಂದವಾಗಿ ಬದುಕಲು ಅವಕಾಶ ಕೊಟ್ಟು, ಪರಿಣಾಮಕಾರಿಯಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡೋಣ. ಮೊಬೈಲ್ ಎಂಬ ಮಾಯಾ ಪೆಟ್ಟಿಗೆಯೊಳಗೆ ಇರುವ ಬಣ್ಣ ಬಣ್ಣದ ಸಂಗತಿಗಳು ನಮ್ಮ ಮನೆಯ ಹಾಗೂ ಸಮಾಜದ ಒಳಗೆ ಸಿಗುವ ನಿಜವಾದ ಸಂಗತಿಗಳನ್ನು ಮರೆಮಾಚುತ್ತಿವೆ. ಆದ್ದರಿಂದ ನಮ್ಮ ಮಕ್ಕಳನ್ನು ನಮ್ಮ ನಾಡಿನ ಸಂಸ್ಕೃತಿಗೆ ತಕ್ಕಂತೆ ಬೆಳೆಸೋಣ. ಆದರೆ ಇತ್ತೀಚಿನ ದಿನಗಳಲ್ಲಿ ನಾವು ಮಕ್ಕಳನ್ನು ಬೆಳೆಸುವುದಕ್ಕಿಂತ ಮಕ್ಕಳನ್ನು ತಯಾರಿಸುತ್ತಿದ್ದೇವೆ. ಇವೆರಡರ ಭಿನ್ನತೆಯನ್ನು ಅರ್ಥ ಮಾಡಿಕೊಳ್ಳಲು ನಮ್ಮ ಸುತ್ತಮುತ್ತಲು ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ ನಮ್ಮ ಮಕ್ಕಳು ಯಾವ ಸಂದರ್ಭದಲ್ಲಿ ನಮ್ಮ ಜೊತೆಗಿರುತ್ತಾರೆ ಎಂಬುದನ್ನು ನೋಡಬೇಕು. ಇಂದು ವೃದ್ಧಾಶ್ರಮಗಳ ಸಂಖ್ಯೆ ಏಕೆ ಹೆಚ್ಚಾಗುತ್ತಿವೆ? ನಮ್ಮ ಮಕ್ಕಳು ವಯಸ್ಸಿಗೆ ಬಂದ ಹಾಗೆ ಬೇರೆಯಾಗಿ ಜೀವಿಸಬೇಕು ಎಂದು ಏಕೆ ಬಯಸುತ್ತಿದ್ದಾರೆ? ಎಂದರೆ ಅದಕ್ಕೆ ಕಾರಣ ನಾವೇ! ನಮ್ಮ ಮಕ್ಕಳನ್ನು ಅವರ ಅಜ್ಜಿ-ತಾತ, ಸಂಬಂಧಿಕರು, ಅಕ್ಕಪಕ್ಕದವರಿಂದ ದೂರ ಮಾಡಿ ಒಂಟಿಯಾಗಿ ಬೆಳೆಸುತ್ತಿರುವುದರಿಂದ ಅವರಲ್ಲಿ ಭಾವನಾತ್ಮಕ ಸಂಬಂಧವಿಲ್ಲದೆ ನಮ್ಮ ಇಳಿಗಾಲದಲ್ಲಿ ಅವರು ನಮ್ಮಿಂದ ದೂರವಾಗಿ ಬದುಕುವಂತಾಗಿದೆ. ನಮ್ಮ ಮಕ್ಕಳು ಜಗತ್ತಿನಲ್ಲಿಯೇ ಅತ್ಯಂತ ಶ್ರೀಮಂತರಾಗಿ ರೂಪುಗೊಳ್ಳಬಹುದು. ಆದರೆ, ನಮ್ಮ ಕೊನೆಗಾಲದಲ್ಲಿ ನಾವು ಆಸ್ಪತ್ರೆಗೆ ಸೇರಿದಾಗ ನಮ್ಮ ಮಗು ಕನಿಷ್ಠ ಒಂದು ದಿನವಾದರೂ ನಮ್ಮ ಜೊತೆ ಇರಲಿಲ್ಲ ಎಂದರೆ ನಾವು ನಮ್ಮ ಮಗುವನ್ನು ಬೆಳೆಸುವಲ್ಲಿ ಸೋತಿದ್ದೇವೆ ಎಂದರ್ಥ! ನಮ್ಮ ಮಕ್ಕಳನ್ನು ಭಾವನಾತ್ಮಕವಾಗಿ ಬೆಳೆಸಿ ನಮ್ಮ ಜೊತೆ ಉಳಿಸಿಕೊಳ್ಳಲು ಆಗಲಿಲ್ಲ ಎಂದರೆ ಅದು ನಾವು ನಮ್ಮ ಮಕ್ಕಳನ್ನು ಬೆಳೆಸಿಲ್ಲ, ತಯಾರಿಸಿದ್ದೇವೆ ಎಂದರ್ಥ. ಹೀಗೆ ನಮ್ಮ ಭಾಷೆಯ ಮೂಲಕ ಪರಿಣಾಮಕಾರಿಯಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳೋಣ. ಆ ಮೂಲಕ ನಮ್ಮ ಭಾಷೆಯನ್ನು ಬಳಸೋಣ, ಉಳಿಸೋಣ. ಎಲ್ಲೆಲ್ಲಿ ಅವಕಾಶ ಸಿಗುತ್ತದೋ ಅಲ್ಲಿ ಕನ್ನಡದಲ್ಲೇ ವ್ಯವಹರಿಸುತ್ತಾ ಹೋದರೆ ನಮ್ಮ ಕನ್ನಡ ಉಳಿಯುತ್ತದೆ. ಅದಕ್ಕಾಗಿ ಎಲ್ಲರೂ ಕೈ ಜೋಡಿಸೋಣ.

## ಕಥೆ – ಮಿತ್ರದ್ರೋಹಿ



ಒಂದು ದಿನ ರಾಜನು ತನ್ನ ಸೇವಕರೊಂದಿಗೆ ಬೇಟೆಯಾಡಲು ಕಾಡಿಗೆ ಹೋದನು. ಹಾಗೇ ನಡೆಯುತ್ತ, ನಡೆಯುತ್ತಾ, ದಟ್ಟವಾದ ಕಾಡಿನಲ್ಲಿ ಸೇವಕರಿಂದ ಬೇರೆಯಾದನು. ರಾತ್ರಿಯೂ ಆಯಿತು. ಆಗ ರಾಜನು ತನ್ನ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ತಾನು ಒಂದು ಮರದ ಕೊಂಬೆಯನ್ನು ಹತ್ತಿ ಕುಳಿತನು. ಆಗ ಒಂದು ಸಿಂಹವು ಕರಡಿಯನ್ನು ಓಡಿಸಿಕೊಂಡು ಬಂದಿತು. ಆ ಕರಡಿಯು ರಾಜನಿದ್ದ ಮರವನ್ನು ಹತ್ತಿತು. ರಾಜ ಮತ್ತು ಕರಡಿಯು ಸ್ನೇಹಿತರಾದರು. ಮಧ್ಯರಾತ್ರಿಯಲ್ಲಿ ಕರಡಿಯು ರಾಜನಿಗೆ “ನೀನು ನನ್ನ ಬೆನ್ನಿಗೆ ಒರಗಿ ಮಲಗಿಕೊ, ಆರಾಮವಾಗಿ ನಿದ್ರೆಮಾಡು, ಚಿಂತಿಸಬೇಡ” ಎಂದಿತು. ಆಗ ರಾಜನು ಆರಾಮವಾಗಿ ಮಲಗಿದನು. ಸಿಂಹವು ಕರಡಿಗೆ ಹೇಳಿತು. “ಕರಡಿ, ನನಗೆ ತುಂಬಾ ಹಸಿವಾಗಿದೆ, ಮನುಷ್ಯನನ್ನು ಕೆಳಗೆ ತಳ್ಳು, ನಾನು ತಿಂದು ಹೋಗುತ್ತೇನೆ. ನಿನಗೆ ನಾನು ಏನೂ ಮಾಡುವುದಿಲ್ಲ” ಎಂದಿತು. ಅದಕ್ಕೆ ಕರಡಿಯು “ನಾನು ಮನುಷ್ಯನನ್ನು ಕೆಳಗೆ ತಳ್ಳಿ ನಂಬಿಕೆ ದ್ರೋಹ ಮಾಡುವುದಿಲ್ಲ” ಎಂದಿತು. ಸಿಂಹವು ಅಲ್ಲಿಂದ ಬೇಟೆಯನ್ನು ಹುಡುಕುತ್ತಾ ಹೊರಟಿತು. ರಾಜನಿಗೆ ಎಚ್ಚರವಾಯಿತು. ಆಗ ರಾಜನು “ನಾನು ಆರಾಮವಾಗಿ ನಿದ್ರೆ ಮಾಡಿದೆ. ನೀನು ಸಹ ನನ್ನ ಬೆನ್ನಿಗೆ ಒರಗಿ ನಿದ್ರೆ ಮಾಡು” ಎಂದು ಕರಡಿಗೆ ಹೇಳಿದನು. ಕರಡಿಯು ನಿದ್ರೆ ಮಾಡಿತು ಮತ್ತೆ ಅದೇ ಮರದ ಕೆಳಗೆ ಸಿಂಹವು ಬಂದಿತು. ಎಚ್ಚರವಾಗಿದ್ದ ರಾಜನನ್ನು ನೋಡಿ “ನಾನು ನಿನಗೆ ತೊಂದರೆ ಮಾಡುವುದಿಲ್ಲ, ಕರಡಿಯನ್ನು ಕೆಳಗೆ ತಳ್ಳು, ಹೊಟ್ಟೆ ತುಂಬ ತಿಂದು ಹೋಗುತ್ತೇನೆ.” ಎಂದು ಹೇಳಿತು. ಆಗ ರಾಜನು ಕರಡಿಯನ್ನು ಕೆಳಗೆ ತಳ್ಳಿದನು. ಕರಡಿ ಕೆಳಗೆ ಬಿದ್ದಿತು. ಕರಡಿ ನೋಡಿದಾಗ ಎದುರಿಗೆ ಸಿಂಹವು ಮತ್ತು ಮರದ ಮೇಲೆ ನಿಂತಿದ್ದ ಮನುಷ್ಯನನ್ನು ನೋಡಿ ಗಾಬರಿಯಾಯಿತು. ಆಗ ಸಿಂಹವು “ಹೆದರಬೇಡ, ನಾನು ನಿನ್ನನ್ನು ತಿನ್ನುವುದಿಲ್ಲ, ಮನುಷ್ಯನಷ್ಟು ನಾನು ಕ್ರೂರಿಯಲ್ಲ” ಎನ್ನುತ್ತಾ ಕರಡಿ ಹಾಗು ಸಿಂಹವು ಜೊತೆಯಾಗಿ ಕಾಡಿನೊಳಗೆ ಹೋದವು.

**ಕಥೆಯ ನೀತಿ – ‘ನಂಬಿದವರಿಗೆ ನಂಬಿಕೆ ದ್ರೋಹ ಮಾಡಬಾರದು’.**




**ತಪಸ್ಯಾ ಎಸ್ ಆರ್**

5ನೆಯ ತರಗತಿ, ‘ಡಿ’ ವಿಭಾಗ

## ಕಣ್ಣಿಗೆ ಕಾಣುವ ದೇವರು



ಒಮ್ಮೆ ದೇವರು ಒಂದು ಮಗುವನ್ನು ಸ್ವರ್ಗದಿಂದ ಭೂಮಿಗೆ ಕಳುಹಿಸಿದರು. ಆಗ ಮಗುವು ಹೊರಡುವ ಮೊದಲು ದೇವರಿಗೆ “ನಾನು ಇನ್ನೂ ಚಿಕ್ಕ ಮಗು, ನನ್ನಿಂದ ಏನೂ ಮಾಡಲು ಸಾಧ್ಯವಿಲ್ಲ. ನಾನು ಭೂಮಿಗೆ ಹೋದರೆ ನನ್ನನ್ನು ಅಲ್ಲಿ ಯಾರು ನೋಡಿಕೊಳ್ಳುತ್ತಾರೆ?” ಎಂದು ಪ್ರಶ್ನಿಸಿತು. ಆಗ ದೇವರು “ನಾನು ನಿನಗೆಂದೇ ಒಬ್ಬ ದೇವತೆಯನ್ನು ಕಳುಹಿಸಿದ್ದೇನೆ. ಅವಳೇ ನಿನ್ನನ್ನು ಜೀವನ ಪೂರ್ತಿ ನೋಡಿಕೊಳ್ಳುತ್ತಾಳೆ ಚಿಂತಿಸಬೇಡ ಮಗು”. ಎಂದು ಉತ್ತರಿಸಿದನು. ಆಗ ಆ ಮಗು ಮತ್ತೆ ’ನನ್ನ ದೇವತೆಯ ಹೆಸರೇನು?’ ಎಂದು ಮರುಪ್ರಶ್ನೆಯನ್ನು ಕೇಳಿದಾಗ ದೇವರು ನೀನು ಅದರ ಬಗ್ಗೆ ಚಿಂತಿಸಬೇಡ, ನೀನು ಅವಳನ್ನು ಅಮ್ಮ ಎಂದು ಕರೆಯುವೆ ಎಂದು ಹೇಳಿದನಂತೆ. ಹೌದಲ್ಲವೇ ನಮ್ಮೆಲ್ಲರಿಗೂ ತುತ್ತು ಕೊಟ್ಟು, ಮುತ್ತನಿಟ್ಟು ಲಾಲಿ ಹಾಡಿ ಮಲಗಿಸುವ ಕಣ್ಣಿಗೆ ಕಾಣುವ ದೇವರು ಅಮ್ಮ ತಾನೇ?



**ದಿಯಾ ನರೇನ್**

5ನೆಯ ತರಗತಿ, ‘ಎಚ್’ ವಿಭಾಗ



## ಮುಂಜಾನೆಯ ಸೂರ್ಯ

ಮುಂಜಾನೆಯ ಸೂರ್ಯ
ನನ್ನಲೊಂದು ಹುರುಪು ಮೂಡಿಸಿತು
ರವಿಯಂತೆ ಪ್ರತಿ ದಿನ, ಪ್ರತಿ ಕ್ಷಣ
ಸಾರ್ಥಕತೆಯಲ್ಲಿ ಬೆಳಗುವವನು ನಮ್ಮ ಬದುಕನ್ನು
ರವಿ ಮಾಮ ರವಿ ಮಾಮ
ಬೇಗನೆ ಬಾರೊ ಧರೆಗೆ,
ಕತ್ತಲ ಸರಿಸಿ ಬೆಳಕನು ಹರಿಸೊ ಭುವಿಗೆ



**ಸಿರಿ ಜಿ ಶ್ರೇಯಸ್**

3ನೆಯ ತರಗತಿ, ‘ಜಿ’ ವಿಭಾಗ

## ಕಾವೇರಿ ಸಂಕ್ರಮಣ




ಇದು ನನ್ನ ನೆಚ್ಚಿನ ಹಬ್ಬ. ಇದು ನಮ್ಮ ಕೊಡಗಿನ ಹಬ್ಬ. ಈ ಹಬ್ಬ ಪ್ರತಿ ವರ್ಷ ಅಕ್ಟೋಬರ್ ತಿಂಗಳನಲ್ಲಿ ಬರುತ್ತದೆ. ಕಾವೇರಿ ನದಿ ನಮ್ಮ ಕೊಡವರ ಕುಲದೇವಿ. ಕೊಡವರು ಪ್ರಕೃತಿಯ ಆರಾಧಕರು. ಕಾವೇರಿ ನದಿ ಪ್ರತಿ ವರ್ಷ ಭಾಗಮಂಡಲದ ತಲಕಾವೇರಿಯಲ್ಲಿ ಹುಟ್ಟುತ್ತಾಳೆ. ಅವಳು ತೀರ್ಥರೂಪಿಣಿಯಾಗಿ ಹರಿಯುತ್ತಾಳೆ ಎಂಬುವುದು ಜನತೆಯ ನಂಬಿಕೆ. ಆ ಜಲವನ್ನು ಮನೆಗೆ ತಂದು ಪೂಜಿಸಿ, ತೀರ್ಥವೆಂದು ಸ್ವೀಕರಿಸುತ್ತೇವೆ. ಆ ದಿನ ಕೊಡಗಿನವರು ತಮ್ಮ ತಮ್ಮ ಮನೆಗಳಲ್ಲಿ ಸೌತೆ ಕಾಯಿ ಅಥವಾ ತೆಂಗಿನಕಾಯಿಗೆ ಸೀರೆ ಉಡಿಸಿ, ತುಂಬಾ ಹೂವುಗಳಿಂದ ಅಲಂಕರಿಸಿ, ಮನೆಯ ಹೆಣ್ಣು ಮಕ್ಕಳ ಆಭರಣಗಳನ್ನು ಅದಕ್ಕೆ ತೊಡಿಸಿ, ಕಾವೇರಿಯ ರೂಪವೆಂಬಂತೆ ಪೂಜಿಸುತ್ತಾರೆ. ಆ ದಿನ ನಮ್ಮ ಮನೆಯಲ್ಲಿ ಅಮ್ಮ, ಅಜ್ಜಿ, ದೊಡ್ಡಮ್ಮ ಎಲ್ಲರೂ ಕೊಡಗಿನ ಸಾಂಪ್ರದಾಯಿಕ ಉಡುಗೆ ಉಟ್ಟು, ತಲೆಗೆ ವಸ್ತ್ರ ಧರಿಸಿ ಕಾವೇರಿ ಮಾತೆಯನ್ನು ಪೂಜಿಸಿ, ಎಲ್ಲರಿಗೂ ನಮಸ್ಕರಿಸಿ, ಆಶೀರ್ವಾದ ಪಡೆಯುತ್ತಾರೆ. ಮನೆಯಲ್ಲೂ ದೋಸೆ ಮತ್ತು ಸಿಹಿಕುಂಬಳ ಕಾಯಿ ಪಲ್ಯ ತಯಾರಿಸಿ ಬೆಳಗಿನ ಉಪಾಹಾರ ಮಾಡುತ್ತಾರೆ. ದೋಸೆಯನ್ನು ಹೊಲ ಗದ್ದೆಗಳ ಬಯಲು, ಮನೆಯ ಮುಂದಿನ ಗೇಟ್, ಬಾವಿ ಕಟ್ಟೆಗಳಲ್ಲಿ ಇಟ್ಟು ಪ್ರಾಣಿ ಪಕ್ಷಿಗಳು ಅವುಗಳನ್ನು ತಿನ್ನುವಂತೆ ನೋಡಿಕೊಳ್ಳುತ್ತಾರೆ. ಈ ಹಬ್ಬದ ದಿನ ನಾನು ರೇಷ್ಮೆ ಲಂಗ ಮತ್ತು ರವಿಕೆ ಧರಿಸಿ, ದಾವಣಿಯಿಂದ ಕೊಡಗಿನ ಶೈಲಿಯ ಸೀರೆ ಉಟ್ಟು, ತಲೆಗೆ ಅಮ್ಮನಂತೆ ವಸ್ತ್ರ ಧರಿಸಿ, ಪುಟ್ಟ ಪುಟ್ಟ ದೋಸೆಗಳನ್ನು ನಾನೇ ಮಾಡಿ ಪ್ರಾಣಿ ಪಕ್ಷಿಗಳಿಗೆ ಕೊಡಲು, ನಮ್ಮ ಮನೆಯ ಆಚೆ ಕಾಂಪೌಂಡ್‌ನಲ್ಲಿ, ಮಹಡಿಯ ಮೇಲೆ ಹೋಗಿ ಇಟ್ಟು ಬರುತ್ತೇನೆ. ಆಗ ಅಲ್ಲಿಗೆ ಬರುವ ಪಕ್ಷಿಗಳನ್ನು ನೋಡುವುದೇ ಬಹಳ ಸೊಗಸು ನನಗೆ. ಪ್ರಕೃತಿ ನಮಗೆ ಮಾಡಿದ ಉಪಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುವುದು ಈ ಹಬ್ಬದ ಸಂಕೇತವಾಗಿದೆ. ನಮ್ಮ ಸುಂದರ ಪ್ರಕೃತಿಯನ್ನು ಕಾಪಾಡಿ, ಸ್ವಚ್ಛವಾಗಿಟ್ಟುಕೊಳ್ಳಬೇಕು. 'ಈ ಸಂಪ್ರದಾಯವನ್ನು ಬಿಡದೆ ಪಾಲಿಸು ಮಗು' ಎಂದು ನನ್ನ ಅಜ್ಜಿ ಆಗಾಗ ನನಗೆ ಹೇಳುತ್ತಿದ್ದರು.



**ಸುರಭಿ ಕೆ ಎಸ್**
4ನೆಯ ತರಗತಿ, 'ಎಚ್' ವಿಭಾಗ

## ನೇಸರನ ಗೆಲುವು



ಒಂದು ಸಲ ಸೂರ್ಯನ ಸಭೆಯಲ್ಲಿ ಚರ್ಚೆ ನಡೆಯುತ್ತಿತ್ತು. ಆಗ ಎಲ್ಲಾ ಗ್ರಹಗಳು ನಾನೇ ಹೆಚ್ಚು, ನಾನೇ ಶ್ರೇಷ್ಠ ಎಂದು ಹೇಳುತ್ತಿದ್ದವು. ಸೂರ್ಯ ದೇವ ಏನು ಮಾತನಾಡಲಿಲ್ಲ. ಆಗ ಚಂದ್ರ, ನಕ್ಷತ್ರಗಳು "ಸೂರ್ಯ ದೇವ ನೀನೇ ಹೇಳು ಯಾರು ಹೆಚ್ಚು?" ಎಂದಾಗ ಸೂರ್ಯ ದೇವ "ನಾನು ನಾಳೆ ಹೇಳುತ್ತೇನೆ" ಎಂದು ಹೇಳಿದನು. ಮಾರನೆಯ ದಿನ ಸೂರ್ಯ ದೇವ ಉದಯಿಸಲೇ ಇಲ್ಲ. ಆಗ ಎಲ್ಲಾ ಜೀವಿಗಳು ಅವರವರ ಕೆಲಸಗಳನ್ನು ಮಾಡಿಕೊಳ್ಳಲು ಆಗಲಿಲ್ಲ. ಇದನ್ನು ನೋಡಿದ ಗ್ರಹಗಳು "ಸೂರ್ಯದೇವಾ, ದಯವಿಟ್ಟು ಉದಯಿಸು. ನೀನೇ ಹೆಚ್ಚು. ನೀನೇ ಶ್ರೇಷ್ಠ. ನೀನು ಇಲ್ಲದೆ ಹೋದರೆ ನಾವು ಯಾರು ಬದುಕಲು ಸಾಧ್ಯವಿಲ್ಲ. ನಮ್ಮನ್ನು ಕ್ಷಮಿಸಿ ಬಿಡು" ಎಂದು ಬೇಡಿಕೊಂಡವು. ಆಗ ಸೂರ್ಯ ಉದಯಿಸಿ, ಎಲ್ಲರ ಬಾಳಿಗೂ ಬೆಳಕಾದನು.



**ಸಿರಿ ಜಿ ಶ್ರೇಯಸ್**
3ನೆಯ ತರಗತಿ, 'ಜಿ' ವಿಭಾಗ

### ಸಾ ಶಿ ಮರುಳಯ್ಯ



"ಅದೆಂಗಾದಾತು... ! ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ... ಹೊನ್ನು, ಹೊಲ ಕೊಂಡುಕೊಂಡ ಈರಣ್ಣಂದೇ... ಅವನು ತಗೊಳ್ಳೊ ಹಂಗ ಮಾಡಿ ಉಪಕಾರ ಮಾಡಬೇಕು ದೈವದವರು."

- ಜೀರಣ್ಣ (9ನೆಯ ತರಗತಿ, ಪ್ರಜಾನಿಷ್ಠೆ, ಗದ್ಯ ಭಾಗ)

## ನಮ್ಮ ಶಾಲೆಯ ಮಕ್ಕಳ ದಿನಾಚರಣೆ



ಚಾಚಾ ನೆಹರು ಅವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಅವರು ಹುಟ್ಟಿದ ದಿನವನ್ನು ಮಕ್ಕಳ ದಿನಾಚರಣೆಯೆಂದು ಆಚರಿಸುತ್ತೇವೆ. ನವೆಂಬರ್ 14 ರಂದು ನಮ್ಮ ಶಾಲೆಯಲ್ಲಿಯೂ ಮಕ್ಕಳ ದಿನಾಚರಣೆಯನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು. ಆ ದಿನ ನಮ್ಮ ಶಿಕ್ಷಕ, ಶಿಕ್ಷಕಿಯರೆಲ್ಲರೂ ನೃತ್ಯ, ನಾಟಕ ಮತ್ತು ಹಾಡನ್ನು ಹಾಡಿ ನಮ್ಮನ್ನೆಲ್ಲ ರಂಜಿಸಿದರು. ಚನ್ನಪಟ್ಟಣದ ಜಾನಪದ ಆಟಿಕೆಯನ್ನು ನಮಗೆ ಉಡುಗೊರೆಯಾಗಿ ನೀಡಿದರು. ಸಿಹಿತಿಂಡಿಗಳನ್ನು ಹಂಚಿದರು. ನಮ್ಮನೆಲ್ಲ ವಿವಿಧ ಆಟದ ಚಟುವಟಿಕೆಗಳ ಮೂಲಕ ಸಂತೋಷ ಪಡಿಸಿದರು. ನಮ್ಮ ಶಿಕ್ಷಕರೆಲ್ಲ ನಮಗಾಗಿ ಅವರ ಅಮೂಲ್ಯ ಸಮಯವನ್ನು ಕೊಟ್ಟು ನಮ್ಮ ಖುಷಿಗಾಗಿ ಶ್ರಮಿಸುತ್ತಾರೆ. ನಮ್ಮ ಏಳಿಗೆ, ಸಂತೋಷವನ್ನು ಬಯಸುತ್ತಾರೆ.



**ಋತ್ವ ಬಾಲಾಜಿ**
3ನೆಯ ತರಗತಿ, 'ಜಿ' ವಿಭಾಗ

## ಕನ್ನಡ ಭಾಷೆ



ಕನ್ನಡ ಭಾಷೆ ನಮ್ಮದು
ಬಹು ಸುಮಧುರವಾದುದು

ಬರೆಯಲು ಬಲು ಸುಲಭ
ಓದಲು ಇನ್ನೂ ಸುಲಭ


ಹರಡಲಿ ಕನ್ನಡದ ಅಭಿಮಾನ
ತುಂಬಲಿ ಕನ್ನಡ ನಮ್ಮ ತನು ಮನ

ನಾವೆಲ್ಲ ಕನ್ನಡ ಬಳಸೋಣ
ಎಲ್ಲರೂ ಸೇರಿ ಉಳಿಸೋಣ



**ಸ್ವದೇಶ್ ಸಿ ಎಂ**
3ನೆಯ ತರಗತಿ, 'ಸಿ' ವಿಭಾಗ

## ಕಾಮನ ಬಿಲ್ಲು



ಸೂರ್ಯನು ಮೂಡಣ ದಿಕ್ಕಿನಲ್ಲಿ ಉದಯಿಸಿ ಪಡುವಣ ದಿಕ್ಕಿನಲ್ಲಿ ಮುಳುಗುತ್ತಾನೆ. ಮುಳುಗುವ ಸಮಯದಲ್ಲಿ ನಮ್ಮ ಮೇಲೆ ಬೀಳುವ ಆ ಹೂ ಬಿಸಿಲು ನಮಗೆ ಏನು ಹಾನಿ ಮಾಡುವುದಿಲ್ಲ. ತುಂತುರು ಮಳೆಹನಿಗಳು ಆ ಸೂರ್ಯನ ಕಿರಣಗಳನ್ನು ಸೇರಿ ನಮಗೆ ಕಾಮನ ಬಿಲ್ಲು ಕಾಣಿಸುತ್ತದೆ. ಆಕಾಶದಲ್ಲಿ ಈ ಕಾಮನ ಬಿಲ್ಲು ಬಣ್ಣ-ಬಣ್ಣಗಳಿಂದ ಮೂಡಿಬರುತ್ತದೆ. ಅಲ್ಲಿ ಕಾಣಿಸುವ ಬಣ್ಣಗಳು ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಕಡುನೀಲಿ ಮತ್ತು ನೇರಳೆ. ಈ ದೊಡ್ಡ ಕಾಮನ ಬಿಲ್ಲು ಭೂಮಿಯಿಂದ ಆಕಾಶದವರೆಗೂ ಆವರಿಸುತ್ತದೆ. ಸೂರ್ಯನು ಮುಳುಗಿದಾಗ, ಮೋಡಗಳು ಚದುರಿ ಮಾಯದ ಬಿಲ್ಲು ಓಡಿಹೋಗುತ್ತದೆ. ಈ ರೀತಿಯಲ್ಲಿ ನನ್ನ ಮಾತಿನಲ್ಲಿ ಕಾಮನ ಬಿಲ್ಲಿನ ಬಗ್ಗೆ ಬಿಚ್ಚಿಟ್ಟಿದ್ದೇನೆ.




**ರಿಶಾನ್ ಹರ್ಷ**
5ನೆಯ ತರಗತಿ, 'ಎ' ವಿಭಾಗ

## ಅಮ್ಮ



ನಾ ಕಂಡ ಸುಂದರ ವ್ಯಕ್ತಿ ನನ್ನ ಅಮ್ಮ
ನಿನ್ನ ಹೊರತುಪಡಿಸಿ
ಬೇರೆ ಯಾರು ಅಲ್ಲ
ನೀನೇ ನನ್ನ ಪ್ರಪಂಚ
ನೀನೇ ನನ್ನ ದೇವರು
ನೀನು ಇಲ್ಲದೆ ಬದುಕಲು ಸಾಧ್ಯವಿಲ್ಲ
ನೀನು ನನ್ನ ಸರ್ವಸ್ವ
ನೀನು ನನ್ನ ಸಲಹೆಗಾರ್ತಿ
ನನಗೆ ನೀನೆಂದರೆ ಪ್ರೀತಿ
ಕಾಳಜಿ ಶಿಕ್ಷಕಿ
ಈ ಜಗತ್ತಿನಲ್ಲಿ ನಿನಗಿಂತ
ಉತ್ತಮರು ಯಾರು ಇಲ್ಲ
ಅಮ್ಮ, ನಿನಗಿಂತ ಬಲಶಾಲಿ ಯಾರು ಇಲ್ಲ



**ಆರಾಧನಾ ಎಸ್ ಅಯ್ಯರ್**
6ನೆಯ ತರಗತಿ, 'ಎ' ವಿಭಾಗ

## ಗಿಡದ ಮನಸ್ಸು



**ದರ್ಶಿತ್ ಎಸ್**
5ನೆಯ ತರಗತಿ, 'ಸಿ' ವಿಭಾಗ

ಗಿಡಮರ ಹಸಿರು ಎಲೆ
ಬೊಡ್ಡೆ ಕಪ್ಪು
ಆದರೆ ಅದರ ಮನ
ಸ್ವಚ್ಛವಾಗಿ ಇರುತ್ತದೆ.

ಗಿಡ ಮರ ನಮಗೆ ಗಾಳಿ, ಹಣ್ಣು ಹೂವು
ಕೊಡುತ್ತದೆ. ಆದರೂ ನಾವು
ಗಿಡ ಮರವನ್ನು ನಾಶ ಮಾಡುತ್ತಿದ್ದೇವೆ.

ಮರದ ಕೆಳಗೆ ಕುಳಿತುಕೊಂಡಾಗ ತಂಪಾದ
ನೆರಳು ಕೊಡುವುದು ಗಿಡಮರಗಳು
ಗಿಡಮರದಿಂದ ಪ್ರಾಣಿ ಪಕ್ಷಿ
ಮನುಷ್ಯ ಬದುಕುತ್ತಿದ್ದಾರೆ.


ಗಿಡಮರವನ್ನು ನಾಶಮಾಡಿದರೆ
ಪ್ರಾಣಿ ಪಕ್ಷಿ ಮನುಷ್ಯನ ಜೀವ
ಉಳಿಯುವುದು ಇಲ್ಲ.
ನಾವು ಮುಂದಿನ ಪೀಳಿಗೆಗಳಿಗೆ ಪ್ರಕೃತಿಯನ್ನು ರಕ್ಷಿಸೋಣ
ಎಲ್ಲರೂ ಒಂದಾಗಿ ಬನ್ನಿ.



## ಸುಮದ ಮೇಲೆ ಹಿಮ



ಘಂ ಘಮ! ಘಮ!
ಗಿಡದ ತುಂಬ ಸುಮ
ಸುಮದ ಮೇಲೆ
ನಲಿದು ತೇಲಿ
ಮಣಿಗಳಂತೆ ಹಿಮ



**ಝೇಕಾರ್ ಟಿ ಕೇದಾರ್**
6ನೆಯ ತರಗತಿ, 'ಬಿ' ವಿಭಾಗ

## ಭಯ ಪಡಿಸುವ ಕನಸು!

ನನಗೆ ಒಂದು ಕನಸು ಬಂದಿತ್ತು
ಅದರಲಿ ಯುದ್ಧ ನಡೆಯುತ್ತಿತ್ತು
ಮನುಷ್ಯತ್ವಕ್ಕೆ ಗೌರವವಿರಲಿಲ್ಲ
ಅಕ್ಕ ಪಕ್ಕ ಬರಿ ಯುದ್ಧ!

ಇದನ್ನು ಕಂಡು ಹೆದರಿದೆ
ಕಣ್ಣನ್ನು ಮಿಟುಕಿಸದೆ
ಜನರ ಹೆಣ
ನೋಡಿ ನಾನು ಬೆಚ್ಚಿದೆ!

ತಕ್ಷಣ ಒಬ್ಬ ಸೈನಿಕ ಅಳುತ್ತಿದ್ದ
ಅವನ ಹತ್ತಿರ ಹೋದೆ
ಆಗಲೇ ಒಬ್ಬ ಸೈನಿಕ
ಹಿಂದೆಯಿಂದ ಚುಚ್ಚಿ ನನ್ನನ್ನು ಕೊಂದನು!

ಇದನ್ನು ಕಂಡು ಬೆಚ್ಚಿ ಎದ್ದಿದ್ದೆ
ನನ್ನ ಮನೆಯ ಕೋಣೆಯಲ್ಲಿದ್ದೆ
ಆಗ ಅರ್ಥವಾಯಿತು
ಅದು ನನ್ನ ಕನಸು!

ಆಗ ಒಂದು ವಚನ ಮಾಡಿದೆ
ಇದು ಆಗಲು ಬಿಡುವುದಿಲ್ಲೆಂದು
ನಾರಾಯಣ ನಾರಾಯಣ





**ವಿಷ್ಣು ಪ್ರಶಾಂತ್**
6ನೆಯ ತರಗತಿ, 'ಎ' ವಿಭಾಗ

## ನನ್ನ ಆದರ್ಶ ವ್ಯಕ್ತಿ 'ಅಪ್ಪ'

ಅಪ್ಪ ಅಂದರೆ ಆಕಾಶ. ಅಷ್ಟು ವಿಶಾಲ ಅಪ್ಪನ ಹಾರೈಕೆ, ನನ್ನ ಅಪ್ಪನ ಪ್ರೀತಿ, ಕಾಳಜಿ, ಸಹನೆ, ವ್ಯಕ್ತಿತ್ವ ಎಲ್ಲವೂ ನನಗೆ ಆದರ್ಶ. ನನ್ನ ಅಪ್ಪ ಹಿರಿಯರೊಂದಿಗೆ ವಿನಮ್ರವಾಗಿ, ಕಿರಿಯರೊಂದಿಗೆ ಪ್ರೀತಿಯಿಂದ, ಅವರ ಜೊತೆಯವರೊಂದಿಗೆ ವಿಶ್ವಾಸ-ಸಲುಗೆಯಿಂದ ನಡೆದುಕೊಳ್ಳುತ್ತಾರೆ. ನನಗೆ ನನ್ನ ಅಪ್ಪನ ಬಗ್ಗೆ ಹೆಮ್ಮೆಯೆನಿಸುತ್ತದೆ.



ನನಗೆ ಆಟದಲ್ಲಿಯೂ, ಪಾಠದಲ್ಲಿಯೂ ನನ್ನಪ್ಪ ಜೊತೆಯಾಗುತ್ತಾರೆ. ನಾವೆಲ್ಲ ಸೇರಿ ಹೊರಾಂಗಣ ಒಳಾಂಗಣ ಕ್ರೀಡೆಗಳನ್ನು ಆಡುತ್ತೇವೆ. ಆಡಿ ದಣಿದಾಗ ತಿಂಡಿ ವ್ಯವಸ್ಥೆಯನ್ನು ಮಾಡುತ್ತಾರೆ. ನನ್ನಪ್ಪನಿಗೆ ಸಂಗೀತವೆಂದರೆ ವಿಶಿಷ್ಟ ಪ್ರೀತಿ. ಅವರು ಗಿಟಾರ್, ಕೀಬೋರ್ಡ್ ನುಡಿಸುತ್ತಾರೆ ಹಾಗು ನನಗೂ ಆಗಾಗ ಕಲಿಸುತ್ತಾರೆ. ಸಂಗೀತದಲ್ಲಿ ನನಗಿರುವ ಆಸಕ್ತಿಗೆ ಅವರೂ ಒಂದು ಕಾರಣ. ನಾನು ಹಾಡುತ್ತಿದ್ದರೆ ತಲ್ಲೀನರಾಗಿ ಕೇಳುತ್ತಾರೆ. ಇದು ನನಗೆ ಸಂಗೀತ ಅಭ್ಯಾಸ ಮಾಡಲು ಹುಮ್ಮಸ್ಸು ತರಿಸುತ್ತದೆ.




ನಾನು ನನ್ನ ತಂದೆಯನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತೇನೆ. ಈಗಲೂ ದೊಡ್ಡವಳಾದ ಮೇಲೆಯೂ; ನಾನು ಮತ್ತು ನನ್ನ ತಂಗಿ ನಮ್ಮ ತಂದೆ ತಾಯಿಯರನ್ನು ಪಡೆದಿದ್ದಕ್ಕಾಗಿ ಕೃತಜ್ಞರಾಗಿದ್ದೇವೆ.

**ಯುಕ್ತಾ ಎಂ**
6ನೆಯ ತರಗತಿ, 'ಎ' ವಿಭಾಗ

**ಡಾ. ಚಂದ್ರಶೇಖರ ಕಂಬಾರ**

ರೆಂಬಿ ಕೊಂಬಿಯ ಮ್ಯಾಲ ಗೂಡ ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ । ಮಲಗ್ಯಾವ ಮರಿಹಕ್ಕಿ ॥
ದೂರ ದೇಶದ ವಲಸಿಗ ಹಕ್ಕಿಗು
ಏತಿ ಜಾಗ ಒಳಗ ।
ಬನ್ನಿರಿ । ನೀವು ನಮ್ಮ ಬಳಗ ॥ (5ನೆಯ ತರಗತಿ, ಮೂಡಲ ಮನೆ, ಪದ್ಯ ಭಾಗ)



## ತ್ಯಾಗದ ಪ್ರತಿರೂಪ 'ಅಮ್ಮ'




ತಾಯಿ ನಮಗೆ ಜನ್ಮ ನೀಡುವುದರ ಜೊತೆಗೆ ನಮ್ಮನ್ನು ನೋಡಿಕೊಳ್ಳುತ್ತಾರೆ. ತಾಯಿಗೆ ಈ ಪ್ರಪಂಚದಲ್ಲಿ ಅತ್ಯುನ್ನತ ಗೌರವವನ್ನು ನೀಡಲಾಗುತ್ತದೆ. ಪ್ರತಿ ವರ್ಷ ಮೇ ತಿಂಗಳನಲ್ಲಿ ವಿಶ್ವ ತಾಯಂದಿರ ದಿನವನ್ನು ಆಚರಿಸಲಾಗುತ್ತದೆ. ತಾಯಿಯನ್ನು ಪ್ರೀತಿ ಮತ್ತು ತ್ಯಾಗದ ಪ್ರತಿರೂಪವೆಂದು ಪರಿಗಣಿಸಲಾಗಿದೆ. ಅಮ್ಮ ಇಲ್ಲದೆ ನಮ್ಮ ಜೀವನವನ್ನು ನಾವು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ತಾಯಿಯನ್ನು ಪ್ರೀತಿ ಮತ್ತು ಸಹಾನುಭೂತಿಯ ಸಂಕೇತವೆಂದು ಪರಿಗಣಿಸಲಾಗಿದೆ. ಪ್ರತಿಯೊಬ್ಬರ ಜೀವನದಲ್ಲಿ ತಾಯಿಯೇ ಮೊದಲ ಗುರುವೆಂದು ಹೇಳಬಹುದು. ಅದಕ್ಕಾಗಿ ನಾವು ನಮ್ಮ ತಾಯಿಯನ್ನು ಗೌರವಿಸಬೇಕು. ನನ್ನ ತಾಯಿ ನನ್ನ ಜೀವನದ ಒಂದು ಅಂಗ. ಜೀವನದಲ್ಲಿ ಹಾಗೂ ಈ ಪ್ರಪಂಚದಲ್ಲಿ ನನಗೆ ತಾಯಿಯೇ ಮೊದಲು.



**ಧಾನ್ವಿ ಆರ್ ಬೆಲಂಕಾರ್**
6ನೆಯ ತರಗತಿ, 'ಜಿ' ವಿಭಾಗ

## ಕಷ್ಟಕ್ಕೆ ಹೆದರಿ ಓಡದೆ ಎದುರಿಸಬೇಕು



ನಾವೆಲ್ಲರೂ ನಮ್ಮ ಜೀವನದಲ್ಲಿ ಏನೇ ಕಷ್ಟ ಬಂದರೂ, ಹೆದರಿ ಓಡದೆ ಬದಲಿಗೆ ಅದನ್ನು ಎದುರಿಸಬೇಕು. ಜೀವನದ ಯಾವುದೇ ಹಂತದಲ್ಲಾದರೂ, ಬರುವ ಸಂಕಟಗಳನ್ನು ಧೈರ್ಯದಿಂದ ಹಿಮ್ಮೆಟ್ಟಿಸಿ ಮುನ್ನಡೆಯಬೇಕು. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಕಷ್ಟಗಳು ಸಂಭವಿಸುತ್ತವೆ. ಅದನ್ನು ಎದುರಿಸುವ ಧೈರ್ಯ, ಶಕ್ತಿ ಹಾಗೂ ಆತ್ಮವಿಶ್ವಾಸವಿದ್ದರೆ ಎಂತಹದ್ದನ್ನು ಸೋಲಿಸಬಹುದು. ಉದಾಹರಣೆಗೆ ರೈತರು ಹಲವಾರು ಕಷ್ಟಗಳನ್ನು ಅನುಭವಿಸುತ್ತಾರೆ. ಅದರಲ್ಲೂ ನೀರಾವರಿ ಸೌಲಭ್ಯವಿಲ್ಲದೆ, ಮಳೆಯನ್ನೇ ನಂಬಿ ಕೃಷಿ ಮಾಡುತ್ತಿರುವ ರೈತರ ಗೋಳು ಹೇಳಲು ಅಸಾಧ್ಯ. ರೈತರು ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕಳಪೆ ಬೀಜ, ಗೊಬ್ಬರ ಸಕಾಲಕ್ಕೆ ದೊರಕದೇ ಇರುವುದು, ಬಾವಿ, ನದಿ ಇದ್ದರೂ ನೀರನ್ನು ಹಾಯಿಸಿಕೊಳ್ಳಲು ವಿದ್ಯುತ್ ಕೊರತೆ, ಬೆಳೆದ ಮೇಲೆ ಕಳ್ಳಕಾಕರ, ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ನಷ್ಟವಾಗುತ್ತದೆ. ಆದರೂ ರೈತರು ಯಾವತ್ತಿಗೂ ಧೃತಿಗೆಡುವುದಿಲ್ಲ, ನಮ್ಮೆಲ್ಲರಿಗೂ ಆಹಾರ ನೀಡುತ್ತಾರೆ. ರೈತರು ಶ್ರಮಜೀವಿಗಳು, ಅವರು ಕಷ್ಟಗಳನ್ನು ಎದುರಿಸಿ ಜೀವನದಲ್ಲಿ ಮುನ್ನಡೆಯುತ್ತಾರೆ.



ಜೀವನದಲ್ಲಿ ಏನೇ ಕಷ್ಟ ಬಂದರೂ, ಸೋತು ತಲೆಬಾಗದೆ, ಧೈರ್ಯದಿಂದ ನಮ್ಮ ಜೀವನದಲ್ಲಿ ಮುನ್ನಡೆಯಬೇಕು. ನಾವು ಕಷ್ಟಗಳನ್ನು ಯಾವತ್ತಿಗೂ ಗಂಭೀರವಾಗಿ ತೆಗೆದುಕೊಳ್ಳಬಾರದು. ಅದರಿಂದ ಪ್ರಯೋಜನವನ್ನು ಪಡೆದುಕೊಂಡು, ನಮ್ಮ ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಬೇಕು. ಆದ್ದರಿಂದ ನಾವು ಕಷ್ಟಗಳಿಗೆ ಹೆದರಿ ಓಡದೆ, ಎದುರಿಸಿ ಜೀವನವನ್ನು ಒಂದು ಪಾಠವಾಗಿ ಸ್ವೀಕರಿಸಬೇಕು.

**ಸಾನಿಧ್ಯ ಕೆ ಮತ್ತು ಅನ್ವೀಕ್ಷಾ ನಾಯಕ್**
7ನೆಯ ತರಗತಿ, 'ಡಿ' ವಿಭಾಗ


## ಎಚ್. ನರಸಿಂಹಯ್ಯ



ನನಗೆ ಜೀವದ ಮೇಲೆ ತುಂಬಾ ಆಸೆ. ಬಹಳ ವರ್ಷ ಆರೋಗ್ಯವಾಗಿ ಬದುಕಬೇಕೆಂಬ ಹಂಬಲ ಚಪಲ. ಆಟೋರಿಕ್ಷಾ ಪ್ರಯಾಣದಿಂದ ಎರಡು ವಿಧವಾದ ಅಪಘಾತಗಳಾಗಬಹುದು. ಮೊದಲನೆಯದಾಗಿ ಕೈಕಾಲು ಮುರಿಯಬಹುದು. ಎರಡನೆಯದಾಗಿ ಅಲ್ಲಿಯೇ ಕೊನೆಯ ಉಸಿರೆಳೆಯಬಹುದು. ಬಹು ವರ್ಷ ಬದುಕಬೇಕೆಂಬ ಉತ್ಕಟ ಆಸೆ ಇದ್ದರೂ, ಕೈಕಾಲು ಮುರಿದುಕೊಂಡು ಮೂಳೆ ವೈದ್ಯರ ಕೈಗೆ ಸಿಕ್ಕಿ ದೇಹದಲ್ಲಿ ನಟ್ಟೂ, ಬೋಲ್ಟೂ ಹಾಕಿಸಿಕೊಂಡು ಬದುಕುವುದಕ್ಕಿಂತ ಅಲ್ಲಿಯೇ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು ಎಂದು ನನ್ನ ಅಭಿಪ್ರಾಯ.

(8ನೆಯ ತರಗತಿ, ಆಟೋರಿಕ್ಷಾದ ರಸಪ್ರಸಂಗಗಳು, ಗದ್ಯ ಭಾಗ)

## ಶ್ರಮ ಜೀವಿ – ರೈತ



ರೈತರು ನಮ್ಮ ದೇಶದ ಪ್ರಾಣ. ರೈತರು ಕೃಷಿಯಿಂದಲೇ ಜೀವನ ಮಾಡುತ್ತಾರೆ. ಅವರು ತಮ್ಮ ಬೆಳೆಗಳನ್ನೇ ನಂಬಿ ಬದುಕುವವರು. ರೈತರು ನಮ್ಮ ದೇಶದ ಆರ್ಥಿಕತೆಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ.

ರೈತರು ತಮ್ಮ ಹೊಲಗದ್ದೆಗಳಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಯಿಂದ ಅವರು ನಮಗೆಲ್ಲಾ ಆಹಾರವನ್ನು ನೀಡುತ್ತಾರೆ ಮತ್ತು ಈ ಮೂಲಕ ನಮ್ಮೆಲ್ಲರ ಹಸಿವನ್ನು ನೀಗಿಸುತ್ತಾರೆ. ರೈತರು ಸೂರ್ಯನಿಗಿಂತ ಮುಂಚಿತವಾಗಿ ಬೇಗನೆದ್ದು ಹೊಲಕ್ಕೆ ಹೋಗುತ್ತಾರೆ ಮತ್ತು ಸೂರ್ಯಾಸ್ತದ ನಂತರ ಮನೆಗೆ ಮರಳುತ್ತಾರೆ. ಇವರನ್ನು ವಿಶ್ವದ ಅತ್ಯಂತ ಶ್ರಮಜೀವಿಗಳು ಎಂದು ಕರೆದರೂ ತಪ್ಪಾಗಲಾರದು. ಭಾರತದ ರೈತರು ಬಡವರಾಗಿದ್ದಾರೆ. ಈ ಬಡತನದಿಂದ ರೈತ ಮತ್ತು ಅವನ ಕುಟುಂಬ ದಿನಕ್ಕೆ ಎರಡು ಹೊತ್ತು ಊಟ ಮಾಡುವುದು ಕಷ್ಟವಾಗಿದೆ. ಈ ಕಾರಣದಿಂದ ನಾವು ಪ್ರತಿದಿನ ಅವರು ಕಷ್ಟಪಟ್ಟು ಬೆಳೆದ ಆಹಾರವನ್ನು ವ್ಯರ್ಥಮಾಡುವುದನ್ನು ನಿಲ್ಲಿಸಬೇಕು ಮತ್ತು ರೈತರನ್ನು ಸತ್ಕರಿಸಬೇಕು.



ರೈತರು ನಮ್ಮ ಸಮಾಜದ ಒಂದು ಮುಖ್ಯವಾದ ಭಾಗ. ಇವರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ನಗರದ ಕಡೆಯೂ ಕಂಡುಬರುತ್ತಿದ್ದಾರೆ. ರೈತರ ಬಡತನ ಅವರನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡುತ್ತಿದೆ. ಈಗೀಗ ನಮ್ಮ ಸರ್ಕಾರ ಅವರಿಗೆ ಸಹಾಯವಾಗುವಂತೆ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ.

**ಧೃತಿ ಎಂ**
7ನೆಯ ತರಗತಿ, 'ಡಿ' ವಿಭಾಗ

## ನಾನೆಂದಿಗೂ ಸೋಲುವುದಿಲ್ಲ, ಸೋತರದು ನಾನಲ್ಲ!




ನಾನು ಇತ್ತೀಚೆಗೆ ಒಂದು ಪುಸ್ತಕವನ್ನು ಓದಿದೆ. ಅದರ ಶೀರ್ಷಿಕೆಯೇ ನನ್ನನ್ನು ಓದುವಂತೆ ಪ್ರೇರೇಪಿಸಿತು. ನಾನು ಓದಿದ ಆ ಪುಸ್ತಕದ ಹೆಸರು 'ನಾನೆಂದಿಗೂ ಸೋಲುವುದಿಲ್ಲ, ಸೋತರದು ನಾನಲ್ಲ!'. ಸೋಲು ಹಾಗೂ ಗೆಲುವು ಎಂಬ ಬದುಕಿನ ಎರಡು ಮುಖಗಳನ್ನು ಈ ಪುಸ್ತಕ ಪರಿಚಯಿಸುತ್ತದೆ. ಗೆಲುವು ಅಥವಾ ಜಯವೆಂಬುದು ಸೋಲಿನ ಹಾದಿಯನ್ನು ದಾಟಿ ಬರುವಂಥದ್ದು. ಸೋಲಿಗೆ ಹೆದರದೆ, ಅದನ್ನು ಪ್ರೀತಿಸುತ್ತಾ ಎದುರಿಸುವುದನ್ನೂ ಸಮಚಿತ್ತತೆಯಿಂದ ಗೆಲುವನ್ನು ಸಾಧಿಸುವುದು ಹೇಗೆ ಎಂಬುದನ್ನೂ ಹಲವಾರು ಗಣ್ಯ ವ್ಯಕ್ತಿಗಳು ತಮ್ಮ ಜೀವನದಲ್ಲಿ ನಡೆದ ಘಟನೆಗಳೊಂದಿಗೆ ವಿವರಿಸಿದ್ದಾರೆ.

ಈ ಪುಸ್ತಕವನ್ನು ಓದಿದ್ದರಿಂದ ನಾನು ಕೆಲವು ಅಭ್ಯಾಸಗಳನ್ನು ರೂಢಿಸಿಕೊಂಡಿದ್ದೇನೆ. ಗೆಲ್ಲಬೇಕು ಎನ್ನುವ ನಿರ್ಣಯವನ್ನು ಮನಸ್ಸಿನಲ್ಲಿ ತೆಗೆದುಕೊಳ್ಳುವುದು ಮತ್ತು ಸೋಲು ಬಂದಾಗ ಸ್ವೀಕರಿಸುವುದು. ಗೆಲುವು ಅಥವಾ ಸೋಲು ಯಾವುದೂ ಶಾಶ್ವತವಲ್ಲ. ಗೆದ್ದು ಬೀಗುವ ದಿನಗಳು ಕೂಡ ಕೊನೆಯಾಗುತ್ತವೆ. ಹಾಗೆಯೇ ಸೋಲಿನ ದಿನಗಳು ಕೂಡ ಹೆಚ್ಚು ದಿನ ಉಳಿಯುವುದಿಲ್ಲ. ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ನಡೆಯುವುದೇ ಬದುಕು. ಮಾಡುವ ಕೆಲಸದಲ್ಲಿ ಶ್ರದ್ಧೆ ಮತ್ತು ನಂಬಿಕೆ ಅತ್ಯಗತ್ಯ. ಸಾಧಿಸುವ ಛಲ ಮನಸ್ಸಿನಲ್ಲಿ ಇಟ್ಟುಕೊಂಡು, ಪ್ರಯತ್ನ ಮಾಡಬೇಕು ಎಂಬ ಇನ್ನೊಂದು ಕಲಿಕೆಯನ್ನು ಹೊತ್ತು ನಡೆಯುವುದೇ ಪರಮಾತ್ಮ.



ಇವುಗಳನ್ನು ಬದುಕಿನುದ್ದಕ್ಕೂ ಮನನ ಮಾಡಿಕೊಂಡು ಮುನ್ನಡೆಯಬೇಕು ಎಂಬ ಮಾತನ್ನು ಮತ್ತೆ ಮತ್ತೆ ನನಗೆ ನಾನೇ ಹೇಳಿಕೊಳ್ಳುತ್ತಿರುತ್ತೇನೆ.

**ಬೆಳ್ಳಿ ಎಸ್ ವಿ**
7ನೆಯ ತರಗತಿ, 'ಜಿ' ವಿಭಾಗ

**ಕುವೆಂಪು**

ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ
ಇಹಪರಗಳೆಳ್ಗೆ! (4ನೆಯ ತರಗತಿ, ಕನ್ನಡಮ್ಮನ ಹರಕೆ, ಪದ್ಯ ಭಾಗ)



# ಉತ್ತಮ ಭವಿಷ್ಯಕ್ಕೆ ಸಮಯ ನಿರ್ವಹಣೆಯ ಮಹತ್ವ



ಮಾನವನ ಪ್ರಗತಿಗೆ ಸಮಯವು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಸಮಯ ನಮಗೆ ಗೋಚರಿಸುವುದಿಲ್ಲ, ಆದರೆ ತುಂಬಾ ವಿಷಯಗಳನ್ನು ಕಲಿಸಿ ಹೋಗುತ್ತದೆ. ಪ್ರತಿಯೊಬ್ಬರ ಜೀವನದಲ್ಲೂ ಸಮಯ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಸಮಯ ನಿರಂತರವಾಗಿ ಮುಂದಕ್ಕೆ ಚಲಿಸುತ್ತಿರುತ್ತದೆ. ಕಳೆದು ಹೋದ ಸಮಯವನ್ನು ಮತ್ತೆ ಪಡೆಯಲಾಗುವುದಿಲ್ಲ. ಪ್ರತಿಯೊಂದು ನಿಮಿಷ ಸೆಕೆಂಡ್‌ಗಳು ಕೂಡ ತುಂಬಾ ಮುಖ್ಯವಾಗುತ್ತವೆ. ಸಮಯ ಎಲ್ಲರಿಗೂ ಒಂದೇ ಆಗಿರುತ್ತದೆ. ಶ್ರೀಮಂತ ಬಡವ, ಲಿಂಗ ತಾರತಮ್ಯವನ್ನು ಮಾಡುವುದಿಲ್ಲ, ಹಣದಿಂದ ಅಥವಾ ಐಶ್ವರ್ಯದಿಂದ ಸಮಯವನ್ನು ಕೊಂಡುಕೊಳ್ಳಲು ಆಗುವುದಿಲ್ಲ. ಸಮಯವನ್ನು ಕಳೆದು ಹೋದದ್ದು, ವರ್ತಮಾನದಲ್ಲಿ ನಡೆಯುತ್ತಿರುವುದು ಮತ್ತು ಮುಂದೆ ನಡೆಯಬಹುದಾದದ್ದು ಎಂದು ವಿಂಗಡಿಸಬಹುದು. ಕಳೆದು ಹೋದ ಸಮಯದಿಂದ ಅನುಭವವನ್ನು ಪಡೆದು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಅನರ್ಥವಾಗಿ ಅಥವಾ ಅನವಶ್ಯಕವಾಗಿ ನಾವುಗಳು ಸಮಯವನ್ನು ವ್ಯರ್ಥ ಮಾಡಬಾರದು. ಕಳೆದು ಹೋದ ಸಮಯವನ್ನು ನಾವು ಎಷ್ಟು ಹಣ ಕೊಟ್ಟರೂ ಹಿಂದಕ್ಕೆ ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಮಯಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ನಾವುಗಳು ಸಮಯವನ್ನು ಸರಿಯಾಗಿ ಬುದ್ಧಿವಂತಿಕೆಯಿಂದ, ಶಿಸ್ತುಬದ್ಧವಾಗಿ ಸದುಪಯೋಗಪಡಿಸಿಕೊಳ್ಳಬೇಕು. ಸಮಯವು ನಿರಂತರವಾಗಿ ಓಡುತ್ತಿರುತ್ತದೆ. ಹೋದ ಸಮಯ ಮತ್ತೆ ಬರುವುದಿಲ್ಲ. ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ನೀಡುವ ಸಮಯ ಅತ್ಯಮೂಲ್ಯವಾದ ಅಂಶವಾಗಿದೆ. ಎಲ್ಲವನ್ನು ದುಡ್ಡು ಕೊಟ್ಟು ಖರೀದಿಸಬಹುದು, ಆದರೆ ಸಮಯವನ್ನು ಮಾತ್ರ ಖರೀದಿಸಲಾಗುವುದಿಲ್ಲ. ಕಳೆದ ಸಮಯ ಮತ್ತೆ ಸಿಗುವುದಿಲ್ಲ. ಯಾವುದೇ ಕೆಲಸ ಕಾರ್ಯಗಳನ್ನು, ಅಭ್ಯಾಸಗಳನ್ನು ಮಾಡದೆ ಸಮಯವನ್ನು ಅನವಶ್ಯಕವಾಗಿ ವ್ಯರ್ಥ ಮಾಡಕೂಡದು. ನಾವು ಸಮಯವನ್ನು ತುಂಬಾ ಬುದ್ಧಿವಂತಿಕೆಯಿಂದ ಬಳಸಬೇಕು. ಸಮಯವನ್ನು ವ್ಯರ್ಥ ಮಾಡುವುದೆಂದರೆ ದೊಡ್ಡ ನಷ್ಟವನ್ನು ಅನುಭವಿಸಿದಂತೆಯೇ ಸರಿ. ಸರಿಯಾದ ಸಮಯದಲ್ಲಿ, ಸರಿಯಾದ ಯೋಜನೆಯನ್ನು ರೂಪಿಸಿಕೊಂಡರೆ ಜೀವನದಲ್ಲಿ ಉನ್ನತಿಯನ್ನು ಕಾಣುತ್ತೇವೆ. ವಿದ್ಯಾರ್ಥಿಗಳು ಅಮೂಲ್ಯ ಸಮಯವನ್ನು ಉತ್ತಮವಾಗಿ ಬಳಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಬಹುದು. ಎಲ್ಲರಿಗೂ ಸಮಯವೂ ಏಳುಬೀಳುಗಳನ್ನು ಕಲಿಸಿಕೊಡುತ್ತದೆ. ಹಾಗಾಗಿ ಸಮಯದ ಮೌಲ್ಯವನ್ನು ಎಲ್ಲರಿಗೂ ತಿಳಿಸಬೇಕು. ಯಶಸ್ಸು ಗಳಿಸಿದ ಜನರನ್ನು ಗಮನಿಸಿದಾಗ ಅವರು ಸಮಯಕ್ಕೆ ಮಹತ್ವ ನೀಡಿರುವುದನ್ನು ಕಾಣಬಹುದು. ಸಮಯವು ಶಿಸ್ತಿನ ಜೀವನವನ್ನು ಮತ್ತು ಸರಿಯಾದ ಜೀವನ ನಿರ್ವಹಣೆಯನ್ನು ಕಲಿಸುತ್ತದೆ.

ಜನರು ಜೀವನದಲ್ಲಿ ಸಾಧನೆ ಮಾಡದೆ ಇರಲು ಕಾರಣ ಅವರು ಸಮಯಕ್ಕೆ ಮಹತ್ವವನ್ನು ನೀಡದೆ ಇರುವುದು. ಹಣಕ್ಕಿಂತ ಅಮೂಲ್ಯವಾದದ್ದು ಸಮಯ. ಹಣವು ಖಾಲಿಯಾದರೆ ಮತ್ತೆ ಸಂಪಾದಿಸಬಹುದು, ಆದರೆ ಹೋದ ಸಮಯವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ.



**ಸಾನಿಧ್ಯ ಕೆ**
7ನೆಯ ತರಗತಿ, 'ಡಿ' ವಿಭಾಗ

# ಪ್ರಕೃತಿ



ಎಷ್ಟು ಸುಂದರವಾಗಿದೆ ಈ ಪರ್ಣ
ಕಣ್ಣಿಗೆ ತಂಪು ನೀಡುವ ಹಸಿರು ಬಣ್ಣ
ಇದರಲ್ಲಿದೆ ಅನೇಕ ಸಂಕೀರ್ಣ
ಮರ ಗಿಡಗಳಲ್ಲಿರುವ ಸುವರ್ಣ


ಎಷ್ಟು ಸುಂದರವಾಗಿದೆ ಈ ಗಗನ
ಭೂಮಿಗೆ ಇದು ಒಂದು ವಸನ
ಗಗನವು ಯಾವಾಗಲೂ ಸನಾತನ
ಸೂರ್ಯ ಚಂದ್ರ ಇರುವ ಈ ಸ್ಥಾನ

ಎಷ್ಟು ಸುಂದರವಾಗಿದೆ ಈ ಗಿರಿ
ಇದನ್ನು ಯಾವಾಗಲೂ ನೋಡುತ್ತೇನೆ ನಗೆಬೀರಿ
ಎಷ್ಟು ಆನಂದವಾಗಿರುತ್ತದೆ ಇದರಿಂದ ಬರುವ ಝರಿ
ಈ ಪ್ರಕೃತಿಗೆ ನಾನು ಯಾವಾಗಲೂ ಆಭಾರಿ



**ಗಾನವಿ ಬಿ**
7ನೆಯ ತರಗತಿ, 'ಬಿ' ವಿಭಾಗ

## ತೇಜಸ್ವಿ ಪ್ರಭಾವ



"ಓದು ಮನಸ್ಸಿಗೆ ಬೆಳಕು ನೀಡುತ್ತದೆ" ಎಂಬಂತೆ, ಪುಸ್ತಕಗಳನ್ನು ಓದುವುದು ನನ್ನ ಮನಸ್ಸಿಗೆ ಯಾವಾಗಲೂ ಸಂತೋಷವನ್ನು ತಂದು ಕೊಟ್ಟಿದೆ. ನನ್ನ ಜೀವನದಲ್ಲಿ ಪುಸ್ತಕಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ನಾನು ಒಬ್ಬಳೆ ಇದ್ದಾಗ ನನ್ನ ಸಂಗಾತಿಯಂತೆ ಪುಸ್ತಕಗಳು ಇರುತ್ತವೆ. ಸಾಮಾನ್ಯವಾಗಿ ನಾನು ಇಂಗ್ಲೀಷ್ ಪುಸ್ತಕಗಳನ್ನು ಓದುತ್ತೇನೆ. ಕನ್ನಡ ಪುಸ್ತಕಗಳನ್ನು ಓದುವುದು ಅಪರೂಪ.

ಒಂದು ದಿನ ನನ್ನ ಶಾಲೆಯಲ್ಲಿ 7ನೆಯ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿರುವ ಚಗಳ ಇರುವೆ ಎಂಬ ಪಾಠವನ್ನು ಶುರು ಮಾಡಿದರು. ಆ ಪಾಠವನ್ನು ಬರೆದವರು ರಾಷ್ಟ್ರಕವಿ ಕುವೆಂಪುರವರ ಪುತ್ರರಾದ ಕೆ ಪಿ ಪೂರ್ಣಚಂದ್ರ ತೇಜಸ್ವಿಯವರು.


ಆ ಪಾಠವನ್ನು ಶುರು ಮಾಡುವ ಮುಂಚೆ ನನ್ನ ಶಿಕ್ಷಕರಾದ ಮಹೇಶ್ ಸರ್, ಅವರಿಗೆ ಪೂರ್ಣಚಂದ್ರ ತೇಜಸ್ವಿ ಅವರ ಮೇಲೆ ಇರುವ ಅಭಿಮಾನವನ್ನು ಮತ್ತು ತೇಜಸ್ವಿಯವರ ಪುಸ್ತಕಗಳು ಎಷ್ಟು ರೋಚಕವಾಗಿರುತ್ತವೆ ಎಂದು ವಿವರಿಸಿದರು. ಪುಸ್ತಕಗಳನ್ನು ಹುಡುಕುತ್ತಿದ್ದ ನನಗೆ ಕುತೂಹಲ ಮತ್ತು ಆ ಪುಸ್ತಕಗಳನ್ನು ಓದಲು ಆಸಕ್ತಿ ಆ ಕ್ಷಣವೇ ಮೂಡಿತು.



ಮನೆಗೆ ಹಿಂದಿರುಗಿ ಪುಸ್ತಕದ ಅಂಗಡಿಗೆ ಹೋಗಿ 'ಕಾಡಿನ ಕಥೆಗಳು – ಅನುಭವಗಳ ಸಂಗ್ರಹ ರೂಪಾಂತರ' ಎಂಬ ಪುಸ್ತಕದ ಬೆನ್ನುಡಿಯನ್ನು ಓದಿದೆ. ಓದಿದ ಕೂಡಲೇ ಈ ಪುಸ್ತಕವನ್ನೇ ಓದಬೇಕು ಎಂದು ತೀರ್ಮಾನ ಮಾಡಿದೆ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ ಈ ಪುಸ್ತಕ ಮುಂದೆ ಏನು? ಎಂಬ ಪ್ರಶ್ನೆಯನ್ನು ನಮ್ಮೆಲ್ಲರಲ್ಲಿ ಹುಟ್ಟಿಸುತ್ತದೆ. ಈ ಪುಸ್ತಕದಲ್ಲಿನ ನನ್ನ ಮೆಚ್ಚಿನ ಕೆಲವು ಕಥೆಗಳೆಂದರೆ, 'ತಾಳವಾಡಿಯ ಮೂಕ ರಾಕ್ಷಸ', 'ಪೆದ್ದಚೂರಿನ ರಾಕ್ಷಸ', ಮತ್ತು 'ಮಂಚಿಹಳ್ಳಿಯ ಮುಗ್ಧರು' ಎಂಬ ಕಥೆಗಳು. ಕನ್ನಡ ಪುಸ್ತಕವನ್ನು ಓದುವುದರಿಂದ ನನ್ನ ವ್ಯಾಕರಣ ಮತ್ತು ಶಬ್ದಕೋಶವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯವಾಗುತ್ತಿದೆ. ಇನ್ನೂ ಹೆಚ್ಚಿನ ಪುಸ್ತಕಗಳನ್ನು ಓದಲು ಉತ್ಸುಕಳಾಗಿದ್ದೇನೆ.

**ಗಾನವಿ ಬಿ**
7ನೆಯ ತರಗತಿ, 'ಬಿ' ವಿಭಾಗ

## ಜೀವನ ಎಂದರೆ



**ಹರ್ಷವರ್ಧಿನಿ**
8ನೆಯ ತರಗತಿ, 'ಎ' ವಿಭಾಗ

ಸಿಹಿ ಕಹಿಯ ಅನುಭವಿಸಿ
ಕಷ್ಟಗಳನ್ನು ಸಹಿಸಿ
ಅದರ ಪ್ರತಿಫಲಗಳನ್ನು ಸ್ವೀಕರಿಸಿ
ಏನೇ ಬರಲಿ ಯಾರೇ ಬರಲಿ
ತಲೆಕೆಡಿಸಿಕೊಳ್ಳದೆ ಸಾಗುವುದೇ ಜೀವನ


ಬೇರೆಯವರ ಕಷ್ಟಗಳಿಗೆ ಭಾಗಿಯಾಗಿ
ನಮ್ಮ ಖುಷಿಗಳನ್ನು ಬೇರೆಯವರಿಗೆ ಹಂಚಿ
ಎಲ್ಲರನ್ನೂ ಸಮನಾಗಿ ನೋಡಿ, ಯಾರ ಮಾತಿಗೂ
ತಲೆಕೆಡಿಸಿಕೊಳ್ಳದೆ ಸಾಗುವುದೇ ಜೀವನ

ನಮ್ಮನ್ನು ನಾವು ಸರಿಯಾಗಿ ಅರಿತುಕೊಂಡು
ನಮ್ಮಲ್ಲಿರುವ ಕಲೆಗಳನ್ನು ಗುರುತಿಸಿ
ನಮಗೆ ಎದುರಾಗುವ ಎಲ್ಲಾ ಕಷ್ಟಗಳನ್ನು ಮೆಟ್ಟಿ
ನಮ್ಮ ಗುರಿಯನ್ನು ಸಾಧಿಸಿ
ಬೇರೆಯವರಿಗೂ ಪ್ರೋತ್ಸಾಹಿಸಿ
ಸಾಗುವುದೇ ಜೀವನ



## ಎಚ್ ಎಸ್ ವೆಂಕಟೇಶಮೂರ್ತಿ

ಅಕ್ರೂರ ಹೇಳಿದ – ಎದೆಯುದ್ದ ಬೆಳ್ದದಾರೆ ಮಕ್ಕಳು ಅಂತ... ಹದಿನಾರುವರ್ಷ ಆಯ್ತು ಕೃಷ್ಣನ್ನ ನೋಡಿ... ನನ್ನ ಕಣ್ಣಲ್ಲಿ ಅವನಿನ್ನೂ ಎಳೆಗೂಸೆ...! ಲೋಕದ ಎಲ್ಲಾ ಮಕ್ಕಳು ಅಪ್ಪ ಅಮ್ಮನ ಕಣ್ಣೆದುರು ದಿನಾ ದಿನಾ ಚೂರು ಚೂರು ಬೆಳೀತಾರೆ... ಮಕ್ಕಳು ಬೆಳೆಯೋದು ನೋಡೋ ಅಪ್ಪ ಅಮ್ಮಂದಿರ ಪುಣ್ಯವೇ ಪುಣ್ಯ... ಮಕ್ಕಳನ್ನು ಆಡಿಸಲಿಲ್ಲ... ಆರೈಕೆ ಮಾಡಲಿಲ್ಲ... ತೊದಲು ನುಡಿ ಕೇಳಲಿಲ್ಲ... ತೂಗಲಿಲ್ಲ... ಜೋಗುಳ ಹಾಡಲಿಲ್ಲ... -ವಸುದೇವ (7ನೆಯ ತರಗತಿ, ಬಿಲ್ಲಹಬ್ಬ, ನಾಟಕ ಭಾಗ)



## ನನ್ನ ವಿಳಾಸ

ದಕ್ಷಿಣ ಕಾಶಿ ಎಂದು ಕರೆಯುವ ಊರೇ ನಮ್ಮೂರು
ಕಪಿಲಾ ನದಿಯ ತಟದಲ್ಲಿದೆ ನನ್ನೂರು
ರಸಬಾಳೆ ಹಣ್ಣಿಗೆ ಹೆಸರುವಾಸಿ ನಮ್ಮೂರು
ಅದೇ ನನ್ನೂರು ನಂಜನಗೂಡು

ನಂಜುಂಡೇಶ್ವರ ಸನ್ನಿಧಿಯ ಪಕ್ಕದ ಬೀದಿಯೇ ನನ್ನ ತವರುಮನೆ
ತಾರಿಸಿಯ ಮನೆ, ಮನೆಯ ಮುಂದೆ ದೊಡ್ಡ ತೋಟ
ಅಲ್ಲಿಹುದೇ ನನ್ನ ತವರೂರು
ಮನೆಯ ಹೆಸರೇ ಧ್ರುವಿದರ್ಶಿ.



**ಧ್ರುವಿಕಾ ಆರ್**
7ನೆಯ ತರಗತಿ, 'ಸಿ' ವಿಭಾಗ

## ನನ್ನ ಪ್ರೀತಿಯ ಮನೆ



ಒಡೆಯರು ನೆಲೆಸಿದ ಭೂಮಿಯಲ್ಲಿ
ನೂರಾರು ಪ್ರಾಣಿಗಳು ವಾಸಿಸುವ ಜಾಗದಲ್ಲಿ
ದೇಶದ ಅತಿ ದೊಡ್ಡ ಅರಮನೆ ಇರುವ ಊರಿನಲ್ಲಿ
ಇರುವುದೇ ನನ್ನ ಪ್ರೀತಿಯ ಮನೆ
ಚಾಮುಂಡಿ ತಾಯಿಯ ಪಾದದಡಿಯಲ್ಲಿ
ವಿಶ್ವೇಶ್ವರ ನಗರದ ಕೈಗಾರಿಕೆ ವಲಯದಲ್ಲಿ
61ನೇ ನಿವೇಶನದಲ್ಲಿರುವ ಅಪಾರ್ಟ್‌ಮೆಂಟನಲ್ಲಿ
ಎರಡನೇ ಮಹಡಿಯಲ್ಲಿ ಡಿ3 ಸಂಖ್ಯೆಯಲ್ಲಿ
ಇರುವ ಮನೆ ನನ್ನ ಪ್ರೀತಿಯ ಮನೆ

**ಇಶಾಂಕ ಸಂತೋಷ್**
7ನೆಯ ತರಗತಿ, 'ಡಿ' ವಿಭಾಗ


## ಇದೇ ನನ್ನ ಮನೆ

ಎಲ್ಲಿದೆ ನನ್ನ ಮನೆ?
ಬನ್ನಿ ನನ್ನ ಗೂಡನ್ನು ಗುರುತಿಸಿರಿ

ನನ್ನ ಊರಿನಲ್ಲಿ ಜಗತ್ಪ್ರಸಿದ್ಧವಾದ ಅರಮನೆ ಇದೆ
ನಾನು ಇರುವ ಸ್ಥಳ ಕೃಷ್ಣದೇವರಾಯರು ಆಳಿದ ಸಾಮ್ರಾಜ್ಯದ ಹೆಸರು
ನನ್ನ ಮನೆ ಎಲ್ಲಿರುವುದು ಎಂದು ಬಲ್ಲಿರಾ?

ನನ್ನ ಗೂಡು ದೊಡ್ಡ ಮೋರಿಯ ಅಕ್ಕಪಕ್ಕದಲ್ಲಿದೆ
ನನ್ನ ದಾರಿಯ ಸಂಖ್ಯೆ ಮತ ಹಾಕಲು ಇರುವ ವಯೋಮಿತಿಯಾಗಿದೆ
ನನ್ನ ಮನೆಯ ಸಂಖ್ಯೆ ಒಂದು ಪ್ರಸಿದ್ಧವಾದ ಉಪಹಾರದ ಮನೆಯಾಗಿದೆ
ನನ್ನ ಗೂಡು ಎಲ್ಲಿರುವುದು ಎಂದು ಬಲ್ಲಿರಾ?

ನನ್ನ ಗೂಡು ಕೋಳಿ ಮೊಟ್ಟೆಯ ಒಳಗಿನ ಮತ್ತು ಹೊರಗಿನ ಬಣ್ಣವನ್ನು ಹೊಂದಿದೆ
ನನ್ನ ಗೂಡಿನ ಕದ ಸೂರ್ಯ ಉದಯದ ದಿಕ್ಕಿನಲ್ಲಿದೆ
ನನ್ನ ಮನೆಯ ಅಂಗಳವೂ ಪುಟ್ಟ ಮಕ್ಕಳು ಹಾಡಲು ಇರುವ ಮೈದಾನವಾಗಿದೆ
ಇದೇ ನನ್ನ ಮನೆ
ಈಗ ನನ್ನ ಮನೆ ಯಾವುದು ಎಂದು ತಿಳಿದಿರಾ!



**ವಿಭಾ ಪಿ ರವೀಂದ್ರ**
7ನೆಯ ತರಗತಿ, 'ಡಿ' ವಿಭಾಗ

## ನನ್ನ ಮನೆಯ ದಾರಿ

ಎರಡು ಊರುಗಳ ಮಧ್ಯದಲ್ಲಿ ಇರುವ ನಮ್ಮೂರು
ಮೈಸೂರು ಬೆಂಗಳೂರು ಹೈವೇ ಸಮೀಪವಿರುವ ಊರು
ಮಂಡ್ಯ ಕೆಎಂ ದೊಡ್ಡಿ ಅಂತಹ ಅಕ್ಕರೆ ಸಕ್ಕರೆಯ ಪಟ್ಟಣದ ಹತ್ತಿರ
ಇರುವ ಊರೇ ನಮ್ಮೂರು
ಕಣ್ಣಿಗೆ ಹಸಿರಿನಿಂದ ಕಂಗೊಳಿಸುವ ಊರು
ಸುತ್ತಲೂ ಭತ್ತ ಕಬ್ಬು ರಾಗಿಯಿಂದ ಕೂಡಿದೆ
ಬಿದಿರು ಇಲ್ಲದೆ ಹೋದರು ಬಿದರಹಳ್ಳಿ ಎನ್ನುವ ಊರೇ ನನ್ನೂರು
ಎತ್ತಿನಗಾಡಿಗಳು ಹಿಂದೆ ಮುಂದೆ ಹೋಗುತ್ತಿರುತ್ತವೆ
ಊರಿನ ಮಧ್ಯದಲ್ಲಿ ಕಬ್ಬಾಳಮ್ಮನ ಗುಡಿ ಹತ್ತಿರವೇ ನಮ್ಮ ಮನೆ
ಎಡಕ್ಕೆ ಮಣ್ಣಿನ ಮನೆ ಬಲಕ್ಕೆ ಹನುಮನ ಗುಡಿ
ಆ ಮಧ್ಯದ ದಾರಿಯಲ್ಲಿ ಹೋದರೆ ಒಂದು ಮನೆ ಮುಂದೆ ತೋಟ
ಆ ತೋಟದಲ್ಲಿ ಹಲವಾರು ಸುಂದರವಾದ ಬಗೆ ಬಗೆ ಹೂವು
ಆ ತೋಟ ಇರುವ ಮನೆ ನನ್ನ ಮುದ್ದಾದ ಮನೆ



**ನಿಹಾರಿಕಾ ಬಿ ಎಚ್**
7ನೆಯ ತರಗತಿ, 'ಸಿ' ವಿಭಾಗ

## ತವರಿಗೆ ಪತ್ರ

ಅಂಚೆ ಅಣ್ಣ ಹೋಗಿ ಬಾ
ನನ್ನ ಪ್ರೀತಿಯ ಓಲೆಯನ್ನು ತೆಗೆದುಕೊಂಡು
ನನ್ನ ಹಡೆದವರ ಮನೆಗೆ

ನಿನ್ನ ಹಡೆದವರ ನಾನೇನು ಬಲ್ಲೆನು?
ಗೊತ್ತಿಲ್ಲ ತೋರಿಸು ಹಡೆದವರ ಸ್ಥಳವನ್ನು

ಮಹಿಷನಪುರದಲ್ಲಿ ನನ್ನ ಹಡೆದವರ ಮನೆ ಇದೆ
ಆ ಬೃಹತ್ ಪಟ್ಟಣದಲ್ಲಿ ನನ್ನ ಹಡೆದವರ ಮನೆ ಇದೆ
ಕುಬೇರ ಮೂಲೆಯಾದ ದಟ್ಟಗಳ್ಳಿಯಲ್ಲಿ
ನನ್ನ ಹಡೆದವರ ಮನೆ ಇದೆ
ಮುಂದಕ್ಕೆ ಹೋದರೆ ಸ್ವಾಮಿ ಕೊರಗಜ್ಜ ಇರುವ
ಕೇರ್ಗಳ್ಳಿಗೆ ಹೋಗುವ ಮಾರ್ಗ ಮಧ್ಯೆ
ಇವರು ಹಸಿದವರಿಗೆ ಅನ್ನವ ನೀಡುವ
ಅನ್ನಪೂರ್ಣೇಶ್ವರಿಯಾದ ಪಟೇಲ್ ಉಪಹಾರ ಮಂದಿರ
ಅದರ ಹತ್ತಿರ ಬಹು ಮಹಡಿ ಕಟ್ಟಡವಿದೆ

ಅಲ್ಲಿಂದ ಕೆಳಗೆ ಬಂದರೆ ಸರ್ಕಾರಿ ಜಾಗವಿದೆ
ನನ್ನ ಸಹೋದರಿ ತನ್ನ ಸ್ನೇಹಿತರೊಂದಿಗೆ ಆಟವಾಡುತ್ತಿರುತ್ತಾಳೆ
ನನ್ನ ಅಮ್ಮ ಚಂದದ ಹೂಗಳನ್ನು ಬೆಳೆಸಿರುತ್ತಾರೆ
ಅದೇ ಅಂಚೆ ಅಣ್ಣ ಹಡೆದವರ ಮನೆ



**ಸಾನಿಧ್ಯಾ ಕೆ**
7ನೆಯ ತರಗತಿ, 'ಡಿ' ವಿಭಾಗ

## ಭಾಗ್ಯದ ಬಳೆಗಾರ

ಭಾಗ್ಯದ ಬಳೆಗಾರ ಹೋಗಿ ಬಾ ನನ್ನ ತವರಿಗೆ
ನಿನ್ನ ತವರೂರು ನನಗೇನು ಗೊತ್ತಿಲ್ಲ
ತೋರಿಸು ಬಾರೆ ತವರೂರ

ಟಿಪ್ಪು ಸುಲ್ತಾನ ಆಳಿದ ಊರು ನಂದು
ಮೈಸೂರು ಕಣೋ ನನ್ನ ತವರೂರು
ಚಾಮುಂಡಿ ಬೆಟ್ಟ ಇದೆ
ರಾಜರ ಅರಮನೆ ಇದೆ
ಅಲ್ಲಿಹುದೋ ನನ್ನ ತವರೂರು

ಎರಡು ಶಾಲೆ ಹತ್ತಿರದಲ್ಲಿ ಅಕ್ಕಪಕ್ಕ ಹಣ್ಣಿನ ಅಂಗಡಿ
ಅದೇ ನೋಡು ನನ್ನ ತವರೂರು
ಮನೆಯ ಮೇಲೆ ಹಂಚಿದೆ
ಸುಣ್ಣದ ಬಣ್ಣದಿಂದ ಕೂಡಿದೆ
ಜನರಿಗೆ ಉಪಹಾರ ನೀಡುವ ಮಂದಿರ ಇದೆ

ಮನೆಮುಂದೆ ಮಕ್ಕಳು ಆಡುತ್ತಾರೆ
ಹೆಂಗಸರು ಕೂಡಿ ಮಾತನ್ನಾಡುತ್ತಾರೆ
ನಂದನ್ ಮಾರ್ಟ್ ಹತ್ತಿರ ಮನೆ ಸಂಖ್ಯೆ 55
ಅದುವೇ ನನ್ನ ಮನೆಯು ಬಳೆಗಾರ




**ಕ್ಷಮಾ ಬಿಂದು ಎಂ ಪಿ**
7ನೆಯ ತರಗತಿ, 'ಇ' ವಿಭಾಗ

# ಗುಹೆಯಲ್ಲಿ ಒಂದು ದಿನ...!



ಮಧ್ಯಾಹ್ನದ ಸಮಯ ನನ್ನ ಮೂವರು ಗೆಳೆಯರು ನನ್ನನ್ನು ಅವರೊಂದಿಗೆ ಆಟವಾಡಲು ಕರೆಯುತ್ತಿದ್ದರು. ಆಗ ನಾನು ಕ್ರಿಕೆಟ್ ಆಟ ಆಡೋಣ ಎಂದು ಹೇಳಿದೆ. ಅವರು ಒಪ್ಪಿಕೊಂಡರು. ನಾವು ನನ್ನ ಕ್ರಿಕೆಟ್ ಬಾಲ್ ಮತ್ತು ಬ್ಯಾಟನ್ನು ತೆಗೆದುಕೊಂಡು ನನ್ನ ಮನೆಯ ಪಕ್ಕದಲ್ಲಿ ಇರುವ ಆಟದ ಮೈದಾನಕ್ಕೆ ಹೋದೆವು. ಆಡುವ ಸಮಯದಲ್ಲಿ ನನ್ನ ಗೆಳೆಯನೊಬ್ಬ ಬಾಲನ್ನು ಒಂದು ದಟ್ಟವಾಗಿ ಬೆಳೆದಿರುವ ಒಂದು ಪೊದೆಯೊಳಕ್ಕೆ ಕಳುಹಿಸಿಬಿಟ್ಟನು. ನಾನು ಅದಕ್ಕೆ ಸ್ವಲ್ಪ ಹತ್ತಿರ ನಿಂತಿದ್ದೆ. ಆ ಪೊದೆಟ ಹತ್ತಿರ ಹೋಗುವಾಗ ಒಂದು ಆಳವಾದ ಗುಂಡಿ ಒಳಗೆ ಬಿದ್ದುಬಿಟ್ಟೆನು. ನನಗೆ ಬಹಳ ಭಯವಾಗಿ ನನ್ನ ಸಹಾಯಕ್ಕಾಗಿ ಕಿರಿಚುತ್ತಿದ್ದೆ, ಆದರೆ ಸಹಾಯ ಮಾಡಲು ಯಾರು ಬರಲಿಲ್ಲ. ನನ್ನ ಗೆಳೆಯರೂ ಬರಲಿಲ್ಲ.



ನಾನು ಸುತ್ತಮುತ್ತಲು ನೋಡಿದೆ ಅದು ಒಂದು ಗುಹೆ. ದೂರದಲ್ಲಿ ಒಂದು ಮೇಣದಬತ್ತಿ ಉರಿಯುತ್ತಿತ್ತು. ಅದರ ಹತ್ತಿರ ಹೋದೆ. ನನ್ನ ಮುಂದೆ ಎರಡು ದಾರಿಗಳಿದ್ದವು. ಒಂದು ದಾರಿಯಲ್ಲಿ ಒಂದು ದೊಡ್ಡ ಹಾವಿತ್ತು. ಇನ್ನೊಂದು ಕಡೆ ಚಾಕು ಹಿಡಿದಿರುವ ಒಂದು ತೆಳುವಾದ ವಿಚಿತ್ರ ಆಕೃತಿ ನಿಂತಿತ್ತು. ಇದರ ಮಧ್ಯೆ ನಾನು ಭಯಭೀತನಾಗಿದ್ದೆ. ನನ್ನನ್ನು ಆ ದೊಡ್ಡ ಹಾವು ಸಾಯಿಸಲು ಬರುವಂತೆ ಕಾಣಿಸುತ್ತಿತ್ತು. ನಾನು ನನ್ನ ಕಣ್ಣನ್ನು ತಕ್ಷಣ ಮುಚ್ಚಿಬಿಟ್ಟೆ. ಸ್ವಲ್ಪ ಸಮಯದ ನಂತರ ಏನಾಯ್ತು ಎಂದು ಕಣ್ಣು ತೆರೆದು ನೋಡಿದೆ. ನನ್ನ ಮೇಲೆ ಸೂರ್ಯನ ಕಿರಣಗಳು ಬೀಳುತ್ತಿದ್ದವು ಗಡಿಯಾರದಲ್ಲಿ ನೋಡಿದರೆ ೮ ಗಂಟೆ ೩೦ ನಿಮಿಷ ಎಂದು ತೋರಿಸುತ್ತಿತ್ತು. ನನ್ನ ಮೈಯೆಲ್ಲಾ ಬೆವೆತುಹೋಗಿತ್ತು. ಕೊನೆಗೆ ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಇಲ್ಲಿಯವರೆಗೆ ನಾನು ಕಂಡದ್ದು ಕೇವಲ ಕನಸು ಎಂದು.

**ಪ್ರಣವ್ ಎ**

೮ನೆಯ ತರಗತಿ, 'ಎ' ವಿಭಾಗ

# ಆಪತ್ತಿಗಾದವನೇ ನೆಂಟ



ಪ್ರತಿ ವರ್ಷ ನಮ್ಮ ಕುಟುಂಬ ನಮ್ಮ ಮನೆದೇವರಾದ ಬಿಳಗಿರಿ ರಂಗನಾಥಸ್ವಾಮಿಯನ್ನು ನೋಡಲು ಬಿಳಗಿರಿರಂಗನ ಬೆಟ್ಟಕ್ಕೆ ಹೋಗುತ್ತೇವೆ. ಕೊರೋನಾದ ದಿನಗಳಲ್ಲಿ, ಆ ಮಹಾಮಾರಿಯ ದೆಸೆಯಿಂದ ಆ ವರ್ಷ ಮನೆದೇವರ ಪೂಜೆಗೆ ಹೋಗದ ಕಾರಣ, ನನ್ನ ಅತ್ತೆ ಮಾವ ಮತ್ತು ಅವರ ಮಗ ಎಲ್ಲರೂ ಹೋಗುವುದಾಗಿ ತೀರ್ಮಾನಿಸಿದೆವು. ಅಲ್ಲಿ ನಮ್ಮ ಪರಿಚಯದವರ ಮನೆಯಲ್ಲಿ ಉಳಿದುಕೊಂಡಿದ್ದೆವು. ಆ ಮನೆಯ ಮುಂದಿನ ನೋಟ ಬೆಳಗಿನ ಕಾಲ ಅಮೃತದ ಹಾಗಿತ್ತು. ಆ ದಿನದ ಸಂಜೆ ನಾವು ಬಿಳಗಿರಿರಂಗನನ್ನು ನೋಡಲು ದೇವಸ್ಥಾನಕ್ಕೆ ಹೋದೆವು. ನಂತರ ವಾಪಸ್ಸು ಮನೆಗೆ ಬಂದೆವು.

ಮಾರನೇ ದಿನ ಸಂಜೆ ಎಲ್ಲರೂ ಕ್ಯಾತೇ ದೇವರಾಯನ ಗುಡಿ ಅರಣ್ಯ ಶಿಬಿರ ಎಂಬ ಸ್ಥಳಕ್ಕೆ ಹೋದೆವು. ಇದ್ದಕ್ಕಿದ್ದಂತೆ ಜೋರು ಮಳೆ ಬೀಳಲು ಪ್ರಾರಂಭವಾಯಿತು. ಸುಮಾರು ಐದಾರು ಕಿಲೋಮೀಟರ್ ಹೋದ ನಂತರ ಒಂದು ಆನೆಯೂ ಕಾಣಿಸಲಿಲ್ಲವೆಂದು ವಾಪಸ್ಸು ಹೊರಡುವ ಯೋಚನೆ ಬಂದಿತ್ತು. ಅದು ತುಂಬಾ ಸಣ್ಣದಾರಿ. ಮಳೆ ಬಿದ್ದ ಕಾರಣ ಕೆಂಪು ಮಣ್ಣು ಕೆಸರಾಗಿ ಮಾರ್ಪಟ್ಟಿತ್ತು.

ಹಿಂದೆ ತಿರುಗಿಸಲು ಪ್ರಯತ್ನಮಾಡಿದ ಕಾರಣ ಆ ಕಾರಿನ ತೂಕ ಮತ್ತು ನಮ್ಮ ಭಾರದಿಂದ ಅದರ ಹಿಂದಿನ ಎರಡು ಚಕ್ರಗಳು ಕೆಸರಿನಲ್ಲಿ ಹೂತುಹೋದವು. ಗಾಡಿ ಹಿಂದೆ-ಮುಂದೆಯೂ ಹೋಗಲು ತಯಾರಾಗಿಲ್ಲದ ಹಾಗೆ ಹಠಮಾಡಿ ನಿಂತಿತ್ತು. ಎಲ್ಲರೂ ಆಚೆ ಬಂದು ಗಾಡಿಯನ್ನು ತಳ್ಳಲು ಚಕ್ರಕ್ಕೆ ಆಧಾರವಾಗಿ ಕಲ್ಲು ಇಡಲು ಪ್ರಯತ್ನಿಸುತ್ತಿದ್ದರು. ಆದರೆ ಕಾರಿನ ಚಕ್ರ ಎಲ್ಲರಿಗೂ ಕೆಸರೆರಚಿತು. ನಮಗೆ ಮುಂದೆ ಏನು ಮಾಡುವುದು ಎಂದು ತಿಳಿಯದೆ ನಿಂತಿದ್ದೆವು. ಆ ರಸ್ತೆಯಲ್ಲಿ ಒಂದು ಜೀವವೂ ಇಲ್ಲದಂತಿದ್ದ ಸಂದರ್ಭದಲ್ಲಿ ದೇವರ ಕೃಪೆಯಿಂದ ಕೊನೆಗೂ ಸುಮಾರು ಐದಾರು ಜನರು ನಮ್ಮ ಸಹಾಯಕ್ಕೆ ಬಂದರು. ಆಶ್ಚರ್ಯದ ವಿಷಯವೆಂದರೆ, ಅವರು ತಮ್ಮ ದೇಹವನ್ನು ಕೆಸರು ಮಾಡಿಕೊಳ್ಳುವ ಸಂಕೋಚ, ಸಾಸವೆ ಕಾಳನಷ್ಟು ಇರಲಿಲ್ಲ. ಕೊನೆಗೆ ಎಲ್ಲರೂ ಸೇರಿಕೊಂಡು ಈ ಗಾಡಿಯನ್ನು ಕೆಸರಿಂದ ಹೊರತರಲು ಸಫಲರಾದರು. ತದನಂತರ ನಾವು ಅವರಿಗೆ ಧನ್ಯವಾದಗಳನ್ನು ತಿಳಿಸಿದೆವು. ನಾವು ಹೋಗುವ ದಾರಿಯಲ್ಲಿ ನಮಗೆ ಆನೆಯ ಗುಂಪನ್ನು ನೋಡಿದ ಅನುಭವವಾಯಿತು. ಈ ಕಥೆಯು ನನಗೆ ಭಯಂಕರ ಹಾಗೂ ಸಾಹಸಮಯ ಎನಿಸುತ್ತದೆ. ನಮಗೆ ಸಹಾಯ ಮಾಡಿದವರ ಮುಖಗಳು ಮತ್ತೆ ಮತ್ತೆ ನೆನಪಾಗುತ್ತವೆ.



**ಪ್ರದ್ಯುಮ್ನ ಆರ್ ರಾವ್**

೮ನೆಯ ತರಗತಿ, 'ಎ' ವಿಭಾಗ

## ಗೆಳೆತನ ಒಂದು ಭಾವ ಬಂಧನ



ನಾನು ಮತ್ತು ಚಾರ್ವಿ ಹಿಂದಿನ ವರ್ಷದಿಂದ ಪರಿಚಯ. ನಾವು ಇಬ್ಬರು ಸಂಗೀತ ಕಾರ್ಯಕ್ರಮದಲ್ಲಿ ಕಳೆದ ವರ್ಷ ಭಾಗಿಯಾಗಿದ್ದೆವು. ನಾನು ಅವಳ ದಿರಿಸನ್ನು ಅವಳಿಂದ ಪಡೆದುಕೊಂಡಿದ್ದೆ. ಇಷ್ಟೇ ಪರಿಚಯ ನಮ್ಮಿಬ್ಬರದು. ಹೊಸ ಶೈಕ್ಷಣಿಕ ವರ್ಷ ಆರಂಭವಾದಾಗ, ನಾವಿಬ್ಬರೂ ಒಂದೇ ತರಗತಿಯಲ್ಲಿ ಇರುತ್ತೇವೆ ಎಂದು ಭಾವಿಸಿರಲಿಲ್ಲ. ಆದರೆ ಅದು ನಿಜವಾಯಿತು. ನನ್ನ ಈ ಹೊಸ ತರಗತಿಯಲ್ಲಿ ಯಾರೂ ನನಗೆ ಸ್ನೇಹಿತರೇ ಇರಲಿಲ್ಲ. ನನ್ನ ಗೆಳತಿಯರೆಲ್ಲ ಬೇರೆ ಬೇರೆ ತರಗತಿಯಲ್ಲಿದ್ದರು. ನನಗೆ ಸ್ವಲ್ಪ ಬೇಸರವಾಗುತ್ತಿತ್ತು. ಕೆಲವು ವಾರಗಳ ನಂತರ ನಮ್ಮ ಸ್ಥಳಗಳನ್ನು ಬದಲಾಯಿಸಿದರು. ಆಗ ನನ್ನ ಪಕ್ಕದಲ್ಲಿದ್ದವರು ಹುಡುಗರಾದ್ದರಿಂದ ಆತ್ಮೀಯವಾಗಿ ಪರಿಚಯಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ನನ್ನ ಮುಂದೆ ಚಾರ್ವಿ ಕುಳಿತಿದ್ದಳು. ಆ ದಿನದಿಂದ ನಾವು ಮಾತನಾಡಲು ಪ್ರಾರಂಭಿಸಿದೆವು.

ಹೌದು, ಭವ್ಯ ಹೇಳಿದ್ದು ನಿಜ. ನಾನು ಮತ್ತು ಭವ್ಯ ಹಿಂದಿನ ವರ್ಷವೇ ಭೇಟಿಯಾಗಿದ್ದೆವು. ನನಗೂ ಹೊಸ ತರಗತಿಯಲ್ಲಿ ಸ್ನೇಹಿತರಿರಲಿಲ್ಲ. ಆ ಸಮಯದಲ್ಲಿ ನಾನು ಒಬ್ಬಳೇ ಇರುತ್ತಿದ್ದೆ. ನಾನು ಈ ವರ್ಷದ ತರಗತಿಯನ್ನು ಮೊದಮೊದಲು ದ್ವೇಷಿಸಲು ಪ್ರಾರಂಭಿಸಿದೆ. ಏಕೆಂದರೆ ನನ್ನ ಗೆಳತಿಯರು ಯಾರು ಇರಲಿಲ್ಲ ಎಂಬುದೇ ಅದಕ್ಕೆ ಕಾರಣವಾಗಿತ್ತು. ಕೆಲವು ವಾರಗಳ ನಂತರ ನಮ್ಮ ಸ್ಥಳಗಳು ಬದಲಾದಾಗ ಅವಳು ಹೇಳಿದಂತೆ ನನ್ನ ಪಕ್ಕದಲ್ಲಿಯೂ ಕೂಡ ಹುಡುಗರು ಇದ್ದರು ಹಾಗಾಗಿ ಅವರೊಂದಿಗೆ ಮಾತನಾಡಲು ಪ್ರಯತ್ನಿಸಲಿಲ್ಲ. ಹಿಂದೆ ಭವ್ಯ ಕುಳಿತಿದ್ದಳು. ಅಂದಿನಿಂದ ನಾವಿಬ್ಬರು ಮಾತನಾಡಲು ಪ್ರಾರಂಭಿಸಿದೆವು. ಕೆಲವು ದಿನಗಳ ನಂತರ ನಾವಿಬ್ಬರು ಆತ್ಮೀಯ ಗೆಳತಿಯರಾಗಿಬಿಟ್ಟೆವು.

ಈ ಗೆಳೆತನ ಒಂದು ಅವಿಸ್ಮರಣೀಯ ಸಂಬಂಧ. ಯಾವುದೇ ವಿಚಾರವನ್ನು ಮುಕ್ತ ಮನಸ್ಸಿನಿಂದ ಹಂಚಿಕೊಳ್ಳಲು ಇದು ಸಹಕರಿಸುತ್ತದೆ. ನಾನು ಮತ್ತು ಚಾರ್ವಿ ನಮ್ಮ ಇಷ್ಟಗಳು ಏನೇನು ಎಂಬುದರ ಬಗ್ಗೆ ಚರ್ಚಿಸಿದೆವು. ಆಶ್ಚರ್ಯವೆಂದರೆ ನಮ್ಮಿಬ್ಬರ ಆಸೆ ಮತ್ತು ಇಷ್ಟಗಳು ಒಂದೇ ರೀತಿಯಲ್ಲಿ ಇದ್ದವು. ಅದನ್ನು ಕೇಳಿ ನಮಗೆ ನಗುಬಂದಿತು. ಆದರೆ ನನ್ನ ಮನಸ್ಸಿನಲ್ಲಿ ಖುಷಿ ಆಗುತ್ತಿತ್ತು. ಅವಳಿಗೂ ಹಾಗೆಯೇ ಖುಷಿಯಾಗಿರುತ್ತದೆ ಅನಿಸುತ್ತದೆ.

ಹೌದೂ, ನನಗೂ ಖುಷಿಯಾಯಿತು. ದಿನಕಳೆದಂತೆ ನಾನು ನನ್ನ ಗುಟ್ಟುಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದೆ. ಅವಳು ತನ್ನ ಗುಟ್ಟುಗಳನ್ನು ಹೇಳಿಕೊಳ್ಳಲು ಪ್ರಾರಂಭಿಸಿದಳು. ಒಂದು ದಿನ ಯಾವುದೋ ಅನಿರೀಕ್ಷಿತ ಘಟನೆಯಿಂದ ನನ್ನ ಮನಸ್ಸಿಗೆ ಘಾಸಿಯಾಗಿತ್ತು. ಅದರಿಂದ ತುಂಬಾ ನೊಂದಿದ್ದೆ. ಅತ್ತಿದ್ದೆ. ಆಗ ನನಗೆ ಬೆಂಬಲವಾಗಿ ನಿಂತವಳು ನನ್ನ ಗೆಳತಿ ಚಾರ್ವಿ. ಅಂತಹ ಸಂದರ್ಭದಲ್ಲಿ ನನಗೆ ಬೆಂಬಲವಾಗಿ ನಿಂತು ಪ್ರೋತ್ಸಾಹಿಸಿದಳು. ಕಣ್ಣೊರೆಸಿದಳು. ಈ ರೀತಿಯ ಸಮಸ್ಯೆಗಳು ಬಂದಾಗ ಹೇಗೆ ಎದುರಿ ಎದುರಿಸಿ ನಿಲ್ಲಬೇಕು ಎಂಬ ಆತ್ಮವಿಶ್ವಾಸವನ್ನು ಕಲಿಸಿದಳು. ನಾನು ಈಗ ಸಮಸ್ಯೆಗಳಿಗೆ ಅಂಜುವುದಿಲ್ಲ. ಸಮಸ್ಯೆಗಳನ್ನು ಎದುರಿಸಲು ಯಾವಾಗಲೂ ತಯಾರಾಗಿರುತ್ತೇನೆ. ಏಕೆಂದರೆ ಯಾವಾಗಲೂ ನನ್ನ ಗೆಳತಿ ನನ್ನ ಜೊತೆಯಲ್ಲಿ ಬೆಂಬಲವಾಗಿ ನಿಂತಿರುತ್ತಾಳೆ.



ಭವ್ಯಳ ಮಾತುಗಳನ್ನು ಕೇಳುತ್ತಿದ್ದಂತೆ ನನ್ನ ಮನಸ್ಸಿಗೆ ಖುಷಿ ಅನಿಸುತ್ತದೆ. ನನಗೂ ಅವಳು ಎಷ್ಟೋ ಸಂದರ್ಭದಲ್ಲಿ ನೆರವಾಗಿದ್ದಾಳೆ. ಒಂದು ರೀತಿನಲ್ಲಿ ನಾನು ಅವಳಿಗೆ ಧೈರ್ಯ ನೀಡಬೇಕೆಂದರೆ, ನನಗೆ ಅವಳೇ ಒಂದು ಧೈರ್ಯ. ನಮ್ಮಿಬ್ಬರ ಆಸೆ ಒಂದೇ, ನಾವಿಬ್ಬರು ಯಾವಾಗಲೂ ಹೀಗೆ ಗೆಳತಿಯರಾಗಿ ಇರಬೇಕು ಎಂಬುದು. ಅದಕ್ಕೆ ಹೇಳುವುದು ಗೆಳೆತನ ಎಂಬುದು ಬಿಡಿಸಲಾಗದ ಭಾವ ಬಂಧನ ಎಂದು.

**ಚಾರ್ವಿ ಎಸ್ ಮತ್ತು ಭವ್ಯಶ್ರೀ ನಟರಾಜ್**
8ನೆಯ ತರಗತಿ, 'ಎ' ವಿಭಾಗ

## ಗುರು ವಂದನೆ




**ಆದ್ಯಾ ಎನ್**
**ಅನು ಮಹೇಶ್**
**ಜಾಹ್ನವಿ ಜೆ ಗೋರೆ**
8ನೆಯ ತರಗತಿ, 'ಎಫ್' ವಿಭಾಗ

ಗುರುವೇ ನಿಮ್ಮಿಂದ ನಮ್ಮಗಳ ಪಯಣ ಶುರು
ಹಿಂದೆ ಗುರು ಮುಂದೆ ಗುರಿ ಎನ್ನುವರು ಹಿರಿಯರು
ಅದ ನಾ ನಂಬಿ ಬಂದೆ ನಿಮ್ಮಲ್ಲಿ ಓ ಗುರು
ತಿದ್ದುವಿರಿ ತಪ್ಪು ಮಾಡಿದಾಗ ಮೊದಲನೆ ಬಾರಿ
ಹೇಳಿಕೊಟ್ಟಿರಿ ಯಾವುದು ತಪ್ಪು ಸರಿ

ಹರಸುವಿರಿ ಮನ ತುಂಬಿ
ಸುಖದಿ ಬಾಳ ನಡೆಸು ಎಂದು
ಗುರುವೇ ನೀವೆ ಸ್ಫೂರ್ತಿ
ನಮ್ಮ ಮೇಲೆ ನಿಮಗಿರುವ ನಿರೀಕ್ಷೆ
ಎಂದಿಗೂ ಸುಳ್ಳಾಗದು ಬೇಕಿದ್ದರೆ ಮಾಡಿ ಒಮ್ಮೆ ಪರೀಕ್ಷೆ

ಅಲ್ಲಿ ಇಲ್ಲಿ ಏಕೆ ಹುಡುಕುವಿರಿ ದೇವರನು
ಗುರುಗಳಿಹರು ಬಂದು ನೋಡಿ ಒಮ್ಮೆ ಶಾಲೆಯನು
ಅಪ್ಪ ಅಮ್ಮ ಕೊಟ್ಟರು ನನಗೆ ಜನುಮವನು
ಗುರುಗಳು ನಮಗೆ ನೀಡಿದರು ಜ್ಞಾನವನು



## ಬಾಲ್ಯದ ಸಿಹಿ ನೆನಪುಗಳು

ಹೇಗೆ ಕಳೆದವೋ ಆ ದಿನಗಳು
ಇನ್ನೂ ಕಣ್ಣ ಮುಂದೆ ಇವೆ ಮಧುರ ಕ್ಷಣಗಳು

ಬಾಲ್ಯದಲ್ಲಿ ಬರೀ ಆಟ
ಆದರೆ ಈಗ ಬರೀ ಪಾಠ
ಬಾಲ್ಯವೆಲ್ಲ ಬರೀ ತುಂಟಾಟ
ಅಮ್ಮನಿಗಾಗುತ್ತಿತ್ತು ಸಂಕಟ

ಬಾಲ್ಯದಲಿ ಏಳು ಬೀಳು ಸಹಜ
ಹೇಗೆ ಮರೆಯಲು ಸಾಧ್ಯ ಮನುಜ
ಬಾಲ್ಯದ ನಮ್ಮ ಗಮನವೇ ಚಾಕಿ
ಆಗ ನಮ್ಮ ಗುರಿಯತ್ತ ಸಾಗುವುದೊಂದೆ ಬಾಕಿ
ಹೇಗೆ ಕಳೆದವೋ ಆ ದಿನಗಳು
ಇನ್ನೂ ಕಣ್ಣ ಮುಂದೆ ಇವೆ ಮಧುರ ಕ್ಷಣಗಳು





**ಹರ್ಷಿತಾ ಡಿ, ಲಾವಣ್ಯ ಪಿ, ಪ್ರಣವಿ ಪಿ ಜಿ**
೮ನೆಯ ತರಗತಿ, 'ಎಫ್' ವಿಭಾಗ

## ನನ್ನಾಸೆ



ಸಸಿಯಂತೆ ಜೀವನದಲ್ಲಿ
ಬರುವ ಬವಣೆಗಳನ್ನು
ದೃಢವಾಗಿ ಎದುರಿಸಬೇಕೆಂಬುದು ನನ್ನಾಸೆ

ಕಟ್ಟಡದ ಅಡಿಪಾಯದಂತೆ
ಸ್ಥಿರವಾಗಿದ್ದು ನನ್ನನ್ನು ನಂಬಿದವರಿಗೆ
ಬೆಂಬಲ ನೀಡುವಂಥಾಗುವುದು ನನ್ನಾಸೆ

ಹಾಲು ಜೇನಿನಂತೆ
ಎಲ್ಲರೊಂದಿಗೆ ಭೇದ ಭಾವವಿಲ್ಲದೆ
ಬೆಸೆಯಬೇಕೆಂಬುದು ನನ್ನಾಸೆ

ಇರುವ ಈ ಒಂದು ಜೀವನದಲ್ಲಿ
ನಿಸ್ವಾರ್ಥ ವ್ಯಕ್ತಿಯಾಗಿ ಬೇರೆಯವರಿಗೆ
ಸಹಾಯ ಮಾಡಬೇಕೆಂಬುದು ನನ್ನ ಮನದಾಳದ ಆಸೆ




**ಲೇಖಾ ಗೌಡ**
೯ನೆಯ ತರಗತಿ, 'ಡಿ' ವಿಭಾಗ

## ಪಶ್ಚಾತ್ತಾಪ



ಒಂದು ದಿನ ತಾತನಿಗೆ ಹುಷಾರಿಲ್ಲದಿದ್ದಾಗ ನಾವು ಬೆಂಗಳೂರಿಗೆ ಹೋಗಬೇಕಿತ್ತು. ಅಲ್ಲಿ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಗ ನಾನು ಆಸ್ಪತ್ರೆಗೆ ಹೋಗಬೇಕಿತ್ತು. ಅಂದಿನ ದಿನ ನನ್ನ ತಂದೆ ಕೇಳಿದಾಗ ನಾನು ಬರುವುದಿಲ್ಲ ಎಂದು ಹೇಳಿದೆ. ಅದಾಗಿ ಒಂದು ವಾರದ ಬಳಿಕ ಅವರ ಆರೋಗ್ಯ ತುಂಬಾ ಹದಗೆಟ್ಟಿತು. ಡಾಕ್ಟರ್ ಇವರಿಗೆ ಲಂಗ್ಸ್, ಕಿಡ್ನಿ ಎಲ್ಲಾ ಫೇಲ್ ಆಗುತ್ತಿದೆ. ಇವರನ್ನು ಇರುವಷ್ಟು ದಿನ ಚೆನ್ನಾಗಿ ನೋಡಿಕೊಳ್ಳಿ ಎಂದರು. ಈಗ ಅವರು ನಮ್ಮೊಂದಿಗಿಲ್ಲ. ನಾನು ಅವರಿರುವಷ್ಟು ದಿನಗಳ ಕಾಲ ಅವರೊಂದಿಗೆ ಇರಬೇಕಿತ್ತು ಎಂದು ಪಶ್ಚಾತ್ತಾಪವಾಗುತ್ತಿದೆ.



**ಭಾನವಿ ಎಚ್ ಶೆಟ್ಟಿ**
೯ನೆಯ ತರಗತಿ, 'ಬಿ' ವಿಭಾಗ

## ನಮ್ಮ ಕರುನಾಡು




ತಲೆ ಎತ್ತಿ ನುಡಿಯುವೆ
ಕನ್ನಡ ಭಾಷೆಯನು
ಶಿರಬಾಗಿ ವಂದಿಸುವೆ
ಕನ್ನಡಮ್ಮನಿಗೆ

ಎಷ್ಟು ಭಾಷೆ ಕಲಿತರೇನು?
ಕನ್ನಡದಲೇ ಉಲಿಯುವೆ
ಎಷ್ಟು ಭಾಷೆ ಕೇಳದರೇನು?
ಕನ್ನಡದಲೇ ಉಳಿಯುವೆ

ಎಲ್ಲಾ ಜನ್ಮದಲ್ಲೂ
ಕನ್ನಡಮ್ಮನ ಮಗಳಾಗುವೆ
ಎಲ್ಲಾ ಜನತೆಯಲ್ಲೂ
ಕನ್ನಡಮ್ಮನ ಕಾಣುವೆ

ಎಲ್ಲರ ಮನದಲಿ
ಕನ್ನಡ ನಲಿಯಲಿ
ಎಲ್ಲರ ಮನದಲಿ
ಕನ್ನಡ ಉಳಿಯಲಿ



**ಅಬಿತಾ ಎನ್**
7ನೆಯ ತರಗತಿ, 'ಬಿ' ವಿಭಾಗ

## ನಮ್ಮ ಹೆಮ್ಮೆಯ ನಾಡು



ನಮ್ಮ ಹೆಮ್ಮೆಯ ನಾಡು ಮೈಸೂರು
ಕಲೆಗಳಿಗೆಲ್ಲ ತವರೂರು
ನಮ್ಮನು ಕಾಯುವ ತಾಯಿ ಚಾಮುಂಡಿ
ಹರಿಯುವ ನೀರು ಕಾವೇರಿ

ಅರಸರು ಕಟ್ಟಿದ ನಾಡಿನಲಿ
ಗರ್ವದಿ ಮೆರೆವೆವು ಗೌರವದಿ
ನಮ್ಮೂರ ನೋಡಲು ಬರುವ ಜನ
ಕಣ್ತುಂಬಿ ನಡೆವರು ವೈಭವದಿ

ದೇಶವ ಸುತ್ತಿ
ಕೋಶವ ಓದಿ
ನಮ್ಮೂರೆ ಚೆಂದವೆಂದು ತಿಳಿಸೋಣ
ಸಹನೆ, ಪ್ರೀತಿಯ ಹರಿಸೋಣ




**ಚಾರ್ವಿ ಎ**
**ಅದ್ವಿಕಾ ಮಳಲೂರು**
**ಸಿರಿ ಎಂ ಡಿ**
8ನೆಯ ತರಗತಿ, 'ಎಫ್' ವಿಭಾಗ

## ನನ್ನನೆಚ್ಚಿನ ಪುಸ್ತಕ




ನನ್ನ ನೆಚ್ಚಿನ ಪುಸ್ತಕಗಳೆಂದರೆ 'ಅಮ್ಮ', 'ಹೊಸಬೆಳಕು', 'ಕಂದನ ಪತ್ರ', 'ಕೆಟ್ಟ ಅಮ್ಮಂದಿರಿಲ್ಲ ಜಗದೊಳಗೆ' ಮತ್ತು 'ಅಮ್ಮ ಹೇಳಿದ ಎಂಟು ಸುಳ್ಳುಗಳು'. ಇವುಗಳಲ್ಲಿ ನನ್ನ ಹೃದಯಕ್ಕೆ ಬಹಳ ಹತ್ತಿರವಾದದ್ದು ಯಾವುದೆಂದರೆ 'ಅಮ್ಮ ಹೇಳಿದ ಎಂಟು ಸುಳ್ಳುಗಳು'.

'ಅಮ್ಮ ಹೇಳಿದ ಎಂಟು ಸುಳ್ಳುಗಳು' ಈ ಕೃತಿಯನ್ನು ರಚಿಸಿದವರು 'ಎ ಆರ್ ಮಣಿಕಾಂತ್'. ಈ ಕೃತಿಯು ಬಹಳ ಅರ್ಥಗರ್ಭಿತವಾಗಿದೆ ಹಾಗೂ ಮಹತ್ವಪೂರ್ಣವಾದದ್ದಾಗಿದೆ. ಪ್ರತಿಯೊಬ್ಬರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಓದಲೇ ಬೇಕಾದ ಕೃತಿಯಿದು. ಈ ಕೃತಿಯನ್ನು ಓದುತ್ತಿದ್ದಾಗ ತನ್ನಿಂತಾನೇ ಕಣ್ಣಂಚಿನಲ್ಲಿ ಹನಿಯು ಮೂಡುತ್ತದೆ. ನನ್ನ ಮೇಲೆ ಈ ಕೃತಿಯು ಅಗಾಧವಾದ ಪ್ರಭಾವವನ್ನು ಬೀರಿದೆ. ಮಾನವೀಯ ಮೌಲ್ಯಗಳನ್ನು ನಾನು ಕಲಿಯುವುದರೊಂದಿಗೆ, ಧೈರ್ಯದಿಂದ ಎಲ್ಲಾ ಕೆಲಸವನ್ನು ನಿರ್ವಹಿಸುವುದು ಮಾತ್ರವಲ್ಲದೆ, ಒಂದೊಂದು ಚಿಕ್ಕ ಗೆಲುವನ್ನು ಹಬ್ಬದಂತೆ ಆಚರಿಸಬೇಕೆಂಬುದನ್ನು ಕಲಿತೆ.



**ಗಹನಾ ಎಚ್ ಪ್ರಸಾದ್**
10ನೆಯ ತರಗತಿ 'ಡಿ' ವಿಭಾಗ

## ನಾಯಕರೆಂದರೆ!



ನಾನು ಬರೆಯುತ್ತಿರುವ ವ್ಯಕ್ತಿ ಬೇರೆ ಯಾರು ಅಲ್ಲ. ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಮ್ಯಾಥ್ಯೂ ಕೆ ಜಿ ಅವರು. ನಾನು ಅವರ ಬಗ್ಗೆ ಬರೆಯಲು ಕಾರಣವೇನೆಂದರೆ ಅವರಲ್ಲಿ ಒಳ್ಳೆಯ ನಾಯಕತ್ವದ ಗುಣಗಳು ಕಾಣಿಸುತ್ತವೆ. ಸಮಯ ಪರಿಪಾಲನೆ ಮಾಡುತ್ತಾರೆ. ಸರಿ ಮತ್ತು ತಪ್ಪುಗಳನ್ನು ಗುರುತಿಸುವುದು ಹೇಗೆ ಎಂದು ತಿಳಿದಿದ್ದಾರೆ. ಶಿಸ್ತನ್ನು ಪಾಲಿಸುತ್ತಾರೆ ಹಾಗೂ ನಮ್ಮ ಶಾಲೆಯ ವಿದ್ಯಾರ್ಥಿಗಳಲ್ಲಿ ಈ ಮೌಲ್ಯಗಳನ್ನು ಬೆಳೆಸುತ್ತಾರೆ. ಅವರು ತಪ್ಪು ಮಾಡಿದವರನ್ನು ತಿದ್ದಿ ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೋತ್ಸಾಹಿಸುತ್ತಾರೆ. ಅವರು ಎಲ್ಲಾ ಚಟುವಟಿಕೆಗಳಲ್ಲಿಯೂ ನಾವು ಭಾಗವಹಿಸುವಂತೆ ಉತ್ತೇಜನ ನೀಡುತ್ತಾರೆ. ಉತ್ತಮ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಪ್ರೋತ್ಸಾಹಿಸುವುದಲ್ಲದೆ ಸೃಜನಶೀಲತೆ ಮತ್ತು ಕಠಿಣ ಪರಿಶ್ರಮವನ್ನು ಪ್ರೋತ್ಸಾಹಿಸುತ್ತಾರೆ. ಶ್ರೀಯುತ ಮ್ಯಾಥ್ಯೂ ಕೆ ಜಿ ಯವರ ಅದ್ಭುತ ನಾಯಕತ್ವದ ಗುಣಗಳಿಂದ ನಾವು ಸ್ಫೂರ್ತಿ ಪಡೆಯಬಹುದು. ಈ ಕಾರಣಗಳಿಂದ ನಾನು ನನ್ನ ಜೀವನದಲ್ಲಿ ಕಂಡ ಉತ್ತಮ ನಾಯಕರೆಂದರೆ, 'ನಮ್ಮ ಪ್ರಾಂಶುಪಾಲರು' ಎಂದು ಹೇಳುತ್ತೇನೆ.



**ಅನ್ವಿತಾ ಗಣಪತಿ ಭಾಗ್ವತ್**
9ನೆಯ ತರಗತಿ, 'ಬಿ' ವಿಭಾಗ

## ನಾ ಕಂಡ ಇಂಪನ




ನನ್ನ ಜೀವನದಲ್ಲಿ ನಾನು ನೋಡಿರುವ ಅತ್ಯುತ್ತಮ ನಾಯಕಿ ನಮ್ಮ ಶಾಲೆಯ ಹೆಡ್ ಗರ್ಲ್ ಇಂಪನಾ ಅಕ್ಕ. ಅವರು ಹಿಂದಿನ ವರ್ಷ ನಮ್ಮ ತಂಡದ ಮುಖ್ಯಸ್ಥೆ ಆಗಿದ್ದರು. ಎಲ್ಲರಿಗೂ ಪ್ರೋತ್ಸಾಹ ನೀಡಿ ಎಲ್ಲಾ ಕಾರ್ಯಕ್ರಮಗಳಲ್ಲಿ ಅಥವಾ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಿದ್ದರು. ಇದರಿಂದಾಗಿ ಅವರಿಗೆ ಎಲ್ಲರನ್ನೂ ಮುನ್ನಡೆಸುವ ಗುಣವಿದೆ ಎಂದು ನನ್ನ ಭಾವನೆ. ಅವರು ತಮ್ಮ ನಿರ್ಧಾರಗಳ ಜೊತೆಗೆ ತಂಡದವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮುಂದುವರೆಯುತ್ತಿದ್ದರು. ಅವರಲ್ಲಿ ಒಳ್ಳೆಯ ನಾಯಕತ್ವ ಗುಣ ಇದೆ ಎಂದು ಹೇಳಬಹುದು. ಅವರು ತಮಗಾದಷ್ಟು ಕೆಲಸ ಮಾಡುತ್ತಿದ್ದರು. ಬೇರೆಯವರನ್ನು ನೀವು ಮಾಡಿ ಅಥವಾ ಮಾಡಲೇಬೇಕು ಎಂದು ವಿನಂತಿಸಿ ಹೇಳುತ್ತಿದ್ದರು. ಎಲ್ಲರನ್ನು ಗೌರವಿಸಿ ಅವರ ಮಾತನ್ನು ಕೇಳುತ್ತಿದ್ದರು. ಕ್ರೀಡಾ ಸ್ಪರ್ಧೆಯ ಸಮಯದಲ್ಲಿ ಎಲ್ಲರಿಗೂ ತಮ್ಮ ಕೈಲಾದಷ್ಟು ಪ್ರಯತ್ನ ಮಾಡಿ ಎಂದು ಹುರಿದುಂಬಿಸುತ್ತಿದ್ದರು. ಅದಕ್ಕಾಗಿ ನಾನು ಅವರ ಮೇಲೆ ತುಂಬಾ ಗೌರವ ಇಟ್ಟಿದ್ದೇನೆ.



**ಲೇಖಾ ಗೌಡ**
9ನೆಯ ತರಗತಿ, 'ಡಿ' ವಿಭಾಗ

## ನಿದಿರಾ ದೇವಿ



ಇರಲಿ ಇಲ್ಲದಿರಲಿ ಆಗಸದಲಿ ರವಿ
ಮನದೊಳಗೆ ಬಂದಳು ನಿದಿರಾ ದೇವಿ
ಹೊತ್ತು ತಂದಳು ತನ್ನೊಳು ನೂರಾರು ಕನಸುಗಳ ಸವಿ
ನಲಿದಾಡಿದಳು ಮನದಲಿ ಹೋಗುವಾಗ ಬಸ್ಸಲಿ
ಕ್ರೋಧದಿ ತಾಂಡವವಾಡಿದಳು ಕುಳಿತಾಗ ತರಗತಿಯಲಿ
ಅವಿತಳು ನೋಡಿದಾಗ ನಗುವ ಗೆಳತಿಯರಲಿ
ಓಡಿಹೋದಳು ಕಂಡಾಗ ಕೆಂಪುಕಣ್ಣ ಶಿಕ್ಷಕರಲಿ



**ತನ್ವಿ ಗಿರೀಶ್**
11ನೆಯ ತರಗತಿ, 'ಬಿ' ವಿಭಾಗ

## ಚಿನ್ಮಯ ಮೂರ್ತಿ

ರಾಮನು ಹುಟ್ಟಿದ ಅಯೋಧ್ಯೆಯಲಿ
ಬೆಳೆದನು ತಾಯಿಯರ ಮಡಿಲಿನಲಿ
ಕಲಿತನು ವಿದ್ಯೆ ವಸಿಷ್ಠರಲಿ
ಬೆಳೆದನು ತ್ರೇತಾಯುಗದ ಚಿನ್ಮಯನು

ಜನಕರಾಯನ ಸುತೆ ಜಾನಕಿಯನು
ವಿವಾಹವಾದನು ಮುರಿದು ಬಿಲ್ಲನು
ಕರೆತಂದನು ಅಯೋಧ್ಯೆಯ ರಾಣಿಯನು
ಆಗಿದ್ದನು ತ್ರೇತಾಯುಗದ ರೂಪವಂತನು

ಕೈಕೆಯು ಮಂಥರೆಯ ಕುಹಕಕೆ ಸಿಲುಕಿ
ಮಾಡಿದಳು ಮಹಾಪಾಪ ಇಲ್ಲದೆ ಯುಕ್ತಿ
ಇದರಿಂದ ಕುಸಿಯಿತು ದಶರಥನ ಶಕ್ತಿ
ಬಲಿಯಾದನು ತ್ರೇತಾಯುಗದ ಆದರ್ಶ ವ್ಯಕ್ತಿ

ವನವಾಸದಲಿ ಸಿಕ್ಕಳು ಶೂರ್ಪನಖಿ
ಹಠ ಹಿಡಿದಳು ಆಗಲು ರಾಮನ ಸಖಿ
ಮುನಿದ ಸೋದರ ಹಿಡಿದನು ಕೈಯಲಿ ಕತ್ತಿ
ಇದ್ದನು ತ್ರೇತಾಯುಗದಲಿ ಒಬ್ಬ ಆಕರ್ಷಕ ವ್ಯಕ್ತಿ


ರಾವಣ ಅಪಹರಿಸಿದ ಸೀತೆಯನು
ತೋರಿಸಿ ಸ್ವರ್ಣ ಜಿಂಕೆಯನು
ಕಾಣದಾದಳು ಸೀತೆ; ಮುರಿಯಿತು ರಾಮನ ಎದೆ
ನಿಜಕೂ ತ್ರೇತಾಯುಗದ ಪುರುಷೋತ್ತಮನಿವನೆ

ಹಾದಿಯಲಿ ಕಂಡನು ಜಟಾಯುವನು
ತಿಳಿದನು ಪುಷ್ಪಕವಿಮಾನ ಹಾರಿದ ದಿಕ್ಕನು
ಜಟಾಯುವಿಗೆ ನೀಡಿ ಮುಕ್ತಿಯನು
ಹೊರಟನು ತ್ರೇತಾಯುಗದ ವೀರನು

ದಾರಿಯಲಿ ಮುಕ್ತಗೊಳಿಸಿದ ದನುವನು
ತಣಿಸಿದನು ಶಬರಿಯ ಮನದಿಂಗಿತವನು
ಸಂಹರಿಸಿದನು ವಾಲಿಯ ದುರಾಸೆಯನು
ಮುಂದುವರೆದನು ತ್ರೇತಾಯುಗದ ಮಹಾಪುರುಷನು

ಛಿನ್ನಗೊಳಿಸಲು ರಾವಣನ ಅಹಂಕಾರವನು
ಹನುಮನು ಸುಟ್ಟನು ಲಂಕೆಯನು
ಸಮರದಲಿ ಮಡಿದನು ರಾವಣನು
ಗೆದ್ದನು ತ್ರೇತಾಯುಗವನೇ ಶ್ರೀರಾಮನು





**ಜನ್ಮಿತಾ ಎಚ್**
10ನೆಯ ತರಗತಿ, 'ಡಿ' ವಿಭಾಗ

### ಪು ತಿ ನರಸಿಂಹಾಚಾರ್

ಇಂಥ ಶಿಷ್ಯೆಯರ್ತಿ ಪಡೆದ ನಿನ್ನ ಗುರುಗಳೆಂಥರೋ
ಅವರ ಮಹಿಮೆ ಕೇಳಿ ಬಲ್ಲೆ ಎಂಥ ಶಾಂತದಾಂತರೊ.
ಅಳಲನೆಲ್ಲ ಮರೆಸಿ ಶಾಂತಿಯೊಂದ ತೋರುವೀ ಬನ
ಇದರ ನಡುವೆ ಪ್ರೇಮಶುದ್ಧೆ ನೀನು! ಸುದಿನವೀ ದಿನ

- ರಾಮು (10ನೆಯ ತರಗತಿ, ಶಬರಿ, ನಾಟಕ ಭಾಗ)



## ನಾನು ಕಂಡ ದೀಪಾವಳಿ



ಎಲ್ಲರಂತೆ ನನಗೂ ಸಹ ದೀಪಾವಳಿ ವಿಶೇಷವಾದದ್ದು. ದೀಪಾವಳಿಯು ಅಜ್ಞಾನದ ಮೇಲೆ ಜ್ಞಾನದ ವಿಜಯವನ್ನು ಮತ್ತು ಕೆಟ್ಟದ್ದರ ಮೇಲೆ ಬೆಳಕು ಬೀರುವುದನ್ನು ಬಿಂಬಿಸುವ ಹಬ್ಬ. ಈ ಹಬ್ಬವು ಶಾಂತಿ, ಸಮೃದ್ಧಿ ಮತ್ತು ಎಲ್ಲರ ಜೀವನದಲ್ಲಿ ಬೆಳಕು ಮೂಡಿಸುತ್ತದೆ ಎಂದು ನಮ್ಮ ಪೂರ್ವಜರ ಕಾಲದಿಂದಲೂ ನಂಬಲಾಗಿದೆ. ಹಿಂದೂಗಳು ಈ ದಿನವನ್ನು ಅದೃಷ್ಟ ಮತ್ತು ಸಂಪತ್ತನ್ನು ತರುವ ಅದೃಷ್ಟದ ದಿನವೆಂದು ಪರಿಗಣಿಸುತ್ತಾರೆ. ನಮ್ಮ ಭಾರತೀಯ ಪುರಾಣಗಳ ಪ್ರಕಾರ ಈ ದಿನದಂದು ರಾಜ ರಾಮನು ದುಷ್ಟ ಶಕ್ತಿಗಳನ್ನು ನಾಶಪಡಿಸಿ,ತನ್ನ ಪ್ರಜೆಗಳಿಂದ ಭವ್ಯವಾದ ಸ್ವಾಗತವನ್ನು ಸ್ವೀಕರಿಸುವ ಮೂಲಕ ಮನೆಗೆ ತಲುಪಿದ ದಿನವಾಗಿದೆ. ದೀಪಾವಳಿ ಹಬ್ಬದ ಪ್ರಮುಖ ಅಂಶವೆಂದರೆ ದೀಪಗಳನ್ನು ಬೆಳಗಿಸುವುದು ಮತ್ತು ಪಟಾಕಿ ಸಿಡಿಸುವುದು. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಪಟಾಕಿಗಳನ್ನು ಸಿಡಿಸುವುದರಿಂದ ನಾವು ಪಡೆಯುವ ಸಂತೋಷದ ಪ್ರಮಾಣವು ಅದರ ಪ್ರತಿಕೂಲ ಪರಿಣಾಮಗಳಿಗೆ ವಿರುದ್ಧವಾಗಿರುತ್ತದೆ. ಇದರಲ್ಲಿರುವ ಹಾನಿಕಾರಕ ರಾಸಾಯನಿಕಗಳು ಮಣ್ಣು, ಭೂಮಿ, ನೀರು, ವಾಯು ಮತ್ತು ಶಬ್ದ ಮಾಲಿನ್ಯವನ್ನು ಉಂಟುಮಾಡುತ್ತದೆ. ಇದು ಸಣ್ಣ ಮಕ್ಕಳು ಮತ್ತು ವಯಸ್ಸಾದವರ ಯೋಗಕ್ಷೇಮವನ್ನು ಹಾನಿಗೊಳಿಸುತ್ತದೆ. ವರ್ಷವಿಡೀ ತಡೆಯಲಾಗಿದ್ದ ಮಾಲಿನ್ಯವು ದೀಪಾವಳಿಯಂದು ಸಂಭವಿಸುತ್ತದೆ. ಇದರಿಂದ ಆಗುವ ಮಾಲಿನ್ಯದಿಂದ, ಪರಿಸರವನ್ನು ಅದರ ಮೂಲ ಸ್ವರೂಪಕ್ಕೆ ಹಿಂದಿರುಗಿಸಲು ಬಹಳ ಸಮಯ ತೆಗೆದುಕೊಳ್ಳುತ್ತದೆ.



ಆದ್ದರಿಂದ ಇದನ್ನು ತಪ್ಪಿಸುವ ಸಲುವಾಗಿ ನಾವು ನಮ್ಮ ಮನೆಯಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಹಬ್ಬವನ್ನು ಆಚರಿಸುತ್ತೇವೆ. ನಾವು ಮೇಣದಬತ್ತಿಗಳು ಅಥವಾ ಇತರ ದೀಪಗಳ ಬದಲಿಗೆ ಮಣ್ಣಿನಿಂದ ಮಾಡಿದ ದೀಪಗಳನ್ನು ಬೆಳಗಿಸುತ್ತೇವೆ. ಮನೆಯನ್ನು ಹೂವಿನಿಂದ ಅಲಂಕರಿಸಿ ರಂಗೋಲಿ ಹಾಕುತ್ತೇವೆ. ಪಟಾಕಿಗಳನ್ನು ಸಿಡಿಸುವುದನ್ನು ಹೊರತುಪಡಿಸಿ, ಈ ವಿಶೇಷ ಸಂದರ್ಭವು ನಮ್ಮ ಸಂಪತ್ತು ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಮೂಲಕ ಶಾಂತಿ ಮತ್ತು ಸಾಮರಸ್ಯದೊಂದಿಗೆ ಹೊಸ ಜೀವನವನ್ನು ಪ್ರಾರಂಭಿಸುವ ಹೊಸ ಭರವಸೆಯನ್ನು ತರುತ್ತದೆ.

**ರಿತುಪರ್ಣ ಪಿ**
10ನೆಯ ತರಗತಿ 'ಎ' ವಿಭಾಗ

## ವೀರಯೋಧ



ನಮ್ಮನ್ನು ಕಾಪಾಡುವವರು ಯಾರು?
ಅವರೇ ನಮ್ಮ ಸೈನಿಕರು

ಇಲ್ಲಿದೆ ಒಂದು ವಿಷಯ
ಯೋಚನೆ ಮಾಡಲು ಬೇಕು ಸಮಯ
ನಮ್ಮ ಸೈನಿಕ ವೀರಯೋಧ
ಮಾಡ್ತಾನ ಬೇರೆ ಸೈನಿಕರಲ್ಲಿ ಭೇದ

ಇವರಲ್ಲಿ ಇಲ್ಲ ಬೇರೆ ಧರ್ಮ
ಇದು ಅತ್ಯುತ್ತಮ ಜೀವನದ ಮರ್ಮ
ಸೈನಿಕರಲ್ಲಿ ಇರಬಹುದು ಬೇರೆ ನುಡಿ
ಆದರೆ ಈ ವಿಷಯ ಅವರಿಗೆ ಕಸಕಡ್ಡಿ

ಯುದ್ಧ ಭೂಮಿಯಲ್ಲಿ ಮರೆತು ಭೇದ
ಒಂದೇ ಗುರಿ ಉದ್ದೇಶ ಹಿಡಿದ
ನಮ್ಮೆಲ್ಲರ ರಕ್ಷಣೆಗೆ ದುಡಿದ
ವೀರರು ನಮ್ಮಯ ಉಸಿರು



**ಅಶ್ರಿತ್ ಎ ಎ**
9ನೆಯ ತರಗತಿ, ಬಿ ವಿಭಾಗ

## ಅಮೃತ ಸೋಮೇಶ್ವರ

ಎನಿತು ಭಾಷೆಗಳ ಕಲಿತಡೇನು ಹೃದಯದ ಭಾಷೆ ಕಲಿಯದನ್ನಕ?
ಎನಿತು ನುಡಿ ಸಡಗರ ತೋರ್ದಡೇನು ಎದೆಯ ಮಿಡಿತವರಿಯದನ್ನಕ?
ಎನಿತು ಶೋಧನೆಗೈದಡೇನು ಹೃದಯ ಶೋಧನೆಗೈಯದನ್ನಕ?
ಎನಿತು ಸಾಧನೆಗೈದಡೇನು ಹೃದಯದ ಬೆಸುಗೆ ಸಾಧಿತವಾಗದನ್ನಕ?
ಇವೆಲ್ಲಕ್ಕೂ ಜೀವಭಾವದಾತ ನೀನೆ ಕಾಣ ಹೃದಯೇಶ ಸೋಮೇಶಾ॥

(6ನೆಯ ತರಗತಿ, ಹೃದಯ ವಚನಗಳು, ಪದ್ಯ ಭಾಗ)



# ಹಾಡು ಹುಟ್ಟಿದ ಸಮಯ ಬಾನುಲಿ ಕಾರ್ಯಕ್ರಮ

ಸಂಗೀತವು ಮನುಷ್ಯನ ಮನಸ್ಸನ್ನು ಕ್ಷಣಮಾತ್ರದಲ್ಲಿ ಆಕರ್ಷಿಸುತ್ತದೆ. ಚಿತ್ರಗೀತೆಗಳು ಸದಾ ಹಸಿರಾಗಿರುವ ಸಹೃದಯಿಯ ಮನ ಮಿಡಿಯುವ ಗುನುಗಾಗಿದೆ. ಹಾಡಿನ ಸಾಹಿತ್ಯ, ರಾಗ, ಅರ್ಥ, ಹೀಗೆ ಹಲವು ಸ್ವಾರಸ್ಯಕರವಾದ ಅಂಶಗಳು ಜನರ ಮನಗೆದ್ದ ಹಾಡಿನ ಮೂಲವಾಗಿದೆ. ನಮ್ಮ ಶಾಲೆಯ ಕನ್ನಡ ರಾಜ್ಯೋತ್ಸವದ ಆಚರಣೆಯ ಅಂಗವಾಗಿ ಹಾಡು ಹುಟ್ಟಿದ ಸಮಯ ರೇಡಿಯೋ ಕಾರ್ಯಕ್ರಮವನ್ನು ಒಂದು ತಿಂಗಳ ಪರ್ಯಂತ ನಡೆಸಲಾಯಿತು.

ಸಾಮಾನ್ಯವಾಗಿ ನಾವೆಲ್ಲ ಹಾಡನ್ನು ಕೇಳುತ್ತಿರುತ್ತೇವೆ ಅಲ್ಲವೇ? ಹಾಡನ್ನು ಆಲಿಸುವಾಗ ಕವಿಗಳು ಹೇಗೆ ಸಾಹಿತ್ಯವನ್ನು ರಚಿಸುವರು? ಆ ಹಾಡಿನ ರಚನೆಗೆ ಸ್ಫೂರ್ತಿ ಯಾವುದು? ಹಾಡು ಹುಟ್ಟುವ ಸಮಯವಾದರೂ ಯಾವುದು? ಕವಿಗಳ ಮನಃಸ್ಥಿತಿ ಆಗ ಹೇಗಿರುತ್ತದೆ? ಅದಕ್ಕೆ ಇಂತಹುದ್ದೇ ಸಮಯವೆಂದೇನಾದರೂ ಇರುತ್ತದೆಯೇ ಎಂಬೆಲ್ಲ ಆಲೋಚನೆಗಳು ನಮ್ಮ ಮನಃಪಟಲದಲ್ಲಿ ಸುಳಿಯುತ್ತಿದ್ದಾಗಲೇ ನಮಗೆ ದೊರೆತದ್ದು ಎ ಆರ್ ಮಣಿಕಾಂತ್ ಅವರ "ಹಾಡು ಹುಟ್ಟಿದ ಸಮಯ" ಎಂಬ ಅಮೂಲ್ಯವಾದ ಕೃತಿ.

ಆ ಕೃತಿಯನ್ನು ಓದುತ್ತಾ, ಓದುತ್ತಾ ಆ ಹಾಡಿನ ಹಿನ್ನೆಲೆಗಳು ಎಷ್ಟು ಸರಳ, ಸುಂದರ ಹಾಗೂ ನೈಜ ಅನುಭವಗಳಿಂದ ಕೂಡಿರುತ್ತವೆ ಎಂಬುದರ ಅರಿವಾದುದರ ಜೊತೆಗೆ ಹಾಡು ಹುಟ್ಟುವಾಗಿನ ಪರಿಸ್ಥಿತಿಯ ಅರಿವೂ ಆಯಿತು. ಪ್ರಕೃತಿ, ಪರಿಸರದ ಸಹಜ ಸೌಂದರ್ಯವನ್ನು ಹಾಡುಗಳ ಮೂಲಕ ಎಷ್ಟು ಚೆನ್ನಾಗಿ ಸೆರೆಹಿಡಿದಿದ್ದಾರೆ ಎಂಬ ಸೋಜಿಗವೂ ಆಯಿತು.

ನಮ್ಮ ಶಾಲೆಯ ವಿದ್ಯಾರ್ಥಿಗಳು ಕೂಡ ಹಾಡು ಹುಟ್ಟಿದ ಸಮಯವನ್ನು ತಿಳಿದುಕೊಳ್ಳಬೇಕೆಂಬ ಸದುದ್ದೇಶದಿಂದ ಹಾಗೂ ಸಾಹಿತ್ಯದೆಡೆಗೆ ಒಲವನ್ನು ಬೆಳೆಸಿಕೊಳ್ಳಲು ಈ ಕಾರ್ಯಕ್ರಮವು ಪೂರಕವಾಗಬಹುದೆಂಬ ಹಂಬಲದಿಂದ ನಮ್ಮ ಶಾಲೆಯಲ್ಲಿಯೇ ಬಾನುಲಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ವಿದ್ಯಾರ್ಥಿಗಳು ಅತ್ಯಂತ ಸಂಭ್ರಮ ಸಡಗರದಿಂದ ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಿದರು.

ಒಟ್ಟಾರೆ ಒಂದು ಸುಂದರ ಅನುಭವವನ್ನು ಈ ಕಾರ್ಯಕ್ರಮ ತಂದೊಡ್ಡಿತು. ಈ ಮೂಲಕ ವಿದ್ಯಾರ್ಥಿಗಳ ಒಂದೊಂದು ಹಾಡಿನ ಪ್ರಸಂಗವನ್ನು ಉತ್ತಮವಾಗಿ ಪ್ರಸ್ತುತಪಡಿಸುತ್ತಾ ಕೇಳುಗರಿಗೆ ರಸದೌತಣವನ್ನು ಉಣಬಡಿಸಿದರು.

ಹೀಗೆಯೇ ಕನ್ನಡ ಬಳಗದ ಕನ್ನಡ ಕೆಲಸಗಳು ಮತ್ತಷ್ಟು ವಿಜೃಂಭಿಸಲಿ. 'ಕರ್ನಾಟಕ'ವೆಂಬ ಹೆಸರು ಹಸಿರಾಗಿ, ಕನ್ನಡ ಉಸಿರಾಗಲಿ ಎಂಬ ಆಶಾವಾದ ಸದಾ ತುಂಬಿರಲಿ.

